CC-O. In Public Domain. Digitized by eGangotri



ಹೊಸ ರೂಪದ 'ಹಿತೋಪದೇಶ'

ದಿಟ ಮೊಲ

ಟ

ಕೆ. ಎಸ್. ರಂಗಪ್ಪ

ಗೀತಾ ಬುಕ್ ಹೌಸ್ : ಪ್ರಕಾಶಕರು : ಮೈಸೂರು

Sri Vidyabharathi Book Centre, Sringeri

CC-O. In Public Domain. Digitized by eGangotri

ಎಳೆಯ ವಯಸ್ಸಿನಲ್ಲಿ ತಿಳಿಮನಸ್ಸಿನ ಮೇಲೆ ಇಟ್ಟ ಆಚ್ಚು ಜೀವಾವಧಿ ತನ್ನ ಪ್ರಭಾವವನ್ನು ಬೀರುತ್ತದೆ ಎಂಬುದು ಸರ್ವರೂ ಆಡುವ ಮಾತು. ಆದರೆ ಈ ಸೂತ್ರವನ್ನು ಅರ್ಥವತ್ತಾಗಿ ಅನುಸರಿಸುವವರು ಎಷ್ಟು ವಿರಳ! ಇವರಲ್ಲಿ ಗಾಢನಂಬಿಕೆ ಇಟ್ಟು ಮಕ್ಕಳಿಗೆ ವಿದ್ಯೆ ಬುದ್ಧಿ ಕಲಿಸುವುದೂ, ತಾವು (ಹಿರಿಯರು) ಮಕ್ಕಳಿದುರು ಆದರ್ಶ ಜೀವನದಲ್ಲಿ ತೊಡಗುವುದೂ ಬರಬರುತ್ತಾ ಕಡಿಮೆ ಹಾಗೂ ಕಷ್ಟಸಾಧ್ಯವಾದ ಸಾಹಸವಾಗುತ್ತಾ ಬರುತ್ತಿದೆ.

ಮಕ್ಕಳ ವ್ಯಕ್ತಿತ್ವವನ್ನು ರೂಪಿಸುವ ಅನೇಕ ಅಂಶಗಳಲ್ಲಿ, ಅವರು ಸದಾ ನೋಡಿ, ತಿಳಿದು (ಹೆಚ್ಚಾಗಿ ತಿಳಿಯದೆಯೇ), ಹೀರಿ, ಜೀರ್ಣಿಸಿಕೊಳ್ಳುತ್ತಿರುವ ತಮ್ಮ ಸುತ್ತಲಿನ ನಡೆನುಡಿಗಳು ಮುಂದೆ ಅವರ ಜೀವನದಲ್ಲಿ ಪರಿಣಾಮಕಾರಿಯಾಗಿ ಅರಳುತ್ತವೆ ಎಂಬುದು ಸ್ವತಸ್ಸಿದ್ಧವಾದರೆ, ಮಕ್ಕಳು ಆಸಕ್ತಿಯಿಂದ ಕೇಳಿ ಅಥವಾ ಸ್ವಂತವಾಗಿ ಓದಿಕೊಂಡು ಮೆಲುಕು ಹಾಕುವ ಸಾಹಿತ್ಯ-ಸಾಮಗ್ರಿಗಳ ಪ್ರಭಾವ ಅವರ ಮೇಲೆ ಹತ್ತರಷ್ಟು ಎನ್ನುವುದರ ಅರಿವು ಸಾಮಾನ್ಯರಿಗೆ ಸಾಕಷ್ಟಿಲ್ಲ. ಇದನ್ನು ಮನಗಂಡು ದೃಢವಾಗಿ ನಂಬಿದ್ದ ಮೇಧಾವಿ ವಿಷ್ಣುಶರ್ಮ ಜನಸ್ಥಭಾವ, ಲೋಕರೀತಿ, ಧರ್ಮಾ-ಧರ್ಮ ವಿವೇಚನೆ, ನೀತಿಮಾರ್ಗ, ಸುಚರಿತೆಗಳನ್ನು ಕೂಡಿಸಿ ತನ್ನ 'ಹಿತೋಪದೇಶ'ದಲ್ಲಿ ರಸವತ್ತಾದ ಭಟ್ಟಿ ಇಳಿಸಿದ್ದಾನೆ. ಆದ್ದರಿಂದ ಕಾಲಾನುಕಾಲದಿಂದ ಈ ಕೃತಿ ಜನಾನುರಾಗ ಪಡೆದಿರುವುದು ಆಶ್ಚರ್ಯವೇನೂ ಅಲ್ಲ. 'ಹಿತೋಪದೇಶ' ಹುಟ್ಟಿದಂದಿನಿಂದ ಹಲವಾರು ಭಾಷೆಗಳಲ್ಲಿ ನೂರಾರು ಭಾಷಾಂತರಗಳು ವಿವಿಧ ನೇಪಗಳನ್ನು ತೊಟ್ಟು ಅನೇಕ ಕಥಾಸರಣಿಗಳು ಹೊರಬಂದಿವೆ. ಆದ್ದರಿಂದ ನುತ್ತೊಂದು 'ಹೊಸ ರೂಪದ ಹಿತೋಪದೇಶ' ಈಗ ಪ್ರವೇಶಿಸುವ ಅವಶ್ಯಕತೆಯೇನು ಎಂಬುದು ಸಾಧುವಾದ ಪ್ರಶ್ನೆ.

ಮುಖ್ಯ ಕಾರಣಗಳನ್ನು ಮಾತ್ರ ಇಲ್ಲಿ ವಿವರಿಸುತ್ತೇನೆ. ಇದುವರೆಗೆ ಪ್ರಕಟವಾಗಿರುವ ಕೃತಿಗಳೆಲ್ಲೆಲ್ಲಾ ಮಾನವಸ್ವಭಾವ, ನ್ಯಾಯಾನ್ಯಾಯ ವಿವೇಚನೆ, ಸುಗಮ ಜೀವನಕ್ಕೆ ಸಹಾಯಕರವಾದ ಚಾತುರ್ಯಗಳನ್ನು ಚಿತ್ರಿಸುವ ಪ್ರಯತ್ನಗಳು ಮಾತ್ರ ನಡೆದಿವೆ. ಆದರೆ 'ಹಿತೋಪದೇಶ'ವು ನಮ್ಮ ಈಗಿನ ಬರಹಗಾರರ ಮುಂದಿಟ್ಟಿರುವ ಅನೂಲ್ಯ ಅವಕಾಶವನ್ನು ಕಥೆಗಾರರಾಗಲಿ, ಬೋಧಕರಾಗಲಿ ಸದುಪಯೋಗಪಡಿಸಿಕೊಳ್ಳದಿರುವುದು ಆತ್ಯಾಶ್ಚರ್ಯ!

[ಹೊದಿಕೆಯ ಪುಟ ಮೂರರಲ್ಲಿ ಮುಂದುವರಿದಿದೆ

Sri Vidyabharathi Book Centre, Sringeri

CC-0. In Public Domain. Digitized by eGangotri

ದಿಟ್ಟ ಮೊಲ

ಕೆ. ಎಸ್. ರಂಗಪ್ಪ

ಗೀತಾ ಬುಕ್ ಹೌಸ್ : ಪ್ರಕಾಶಕರು : ಮೈಸೂರು

Sri Vidyabharathi Book Centre, Sringeri

DITṬA MOLA [The Bold Bunny] — A New Version of *Hitōpadēśa* by K. S. Rangappa. Published by Geetha Book House, K. R. Circle, Mysore 570 001, 1984.

CC-0. In Public Domain. Digitized by eGangotri

ಪ್ರಥಮ ಮುದ್ರಣ 1984
ಕಾಪಿರೈಟ್ © ಕೆ. ಎಸ್. ರಂಗಪ್ಪ

Note: All rights, including those of translation, broadcasting, staging and screening, and public reading of this work are fully protected according to the International Copyright Convention. Written permission must be obtained from the author for the use of this work in any manner, except for bona fide criticism or review.

ಮುದ್ರಕರು
ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್, ಮೈಸೂರು 570 004
Sri Vidyabharathi Book Centre, Sringeri

CC-O. In Public Domain. Digitized by eGangotri

ದಿಟ್ಟ ಮೊಲ

ಭಾಸುರಕ ಎಂಬ ಸಿಂಹವು ಒಂದು ದಟ್ಟವಾದ ಕಾಡಿನಲ್ಲಿ ರಾಜನಾಗಿತ್ತು. ಅದಕ್ಕೆ ಬಹಳ ಗರ್ವ. ತನ್ನ ಪ್ರಜೆಗಳಾದ ಕಾಡುಪ್ರಾಣಿಗಳನ್ನು ಅದು ಬಹು ಕ್ರೂರವಾಗಿ ಆಳುತ್ತಿತ್ತು. ಭಾಸುರಕ ಜಂತುಗಳನ್ನು ಆಹಾರಕ್ಕೆ ಮಾತ್ರವೇ ಕೊಲ್ಲುತ್ತಿರಲಿಲ್ಲ; ಸುಮ್ಮನೆ ಆಟಕ್ಕೆಂದೇ ಸಾಧು ಜೀವಿಗಳನ್ನು ಬೇಟೆಯಾಡಿ ಕೊಂದುಹಾಕುತ್ತಿತ್ತು. ಬೆಕ್ಕಿನ ಚೆಲ್ಲಾಟ ಇಲಿಗೆ ಪ್ರಾಣಸಂಕಟ! ನಿರಪರಾಧಿಗಳಾದ ಬಡಪ್ರಾಣಿಗಳು ಬಲಶಾಲಿಯಾದ ಸಿಂಹರಾಜನನ್ನು ಎದುರಿಸಲಾಗುತ್ತಿರಲಿಲ್ಲ. ಆದರೂ ಹೇಗಾದರೂ ಮಾಡಿ ತಮ್ಮ ರಕ್ತದಲ್ಲಿ ಆಟವಾಡುತ್ತಿದ್ದ ಆ ರಾಕ್ಷಸನಿಂದ ತಪ್ಪಿಸಿಕೊಳ್ಳಲು ಅವು ಹಂಬಲಿಸುತ್ತಿದ್ದುವು. ಯಾರಿಗೆ ತಾನೆ ಸಾಯಲು ಇಷ್ಟ?

ಇದಕ್ಕಾಗಿ ವನಜೀವಿಗಳೆಲ್ಲಾ ಒಮ್ಮೆ ಭಾಸುರಕನ ಗುಹೆಯಿಂದ ದೂರದಲ್ಲಿದ್ದ ಒಂದು ದೊಡ್ಡ ಆಲದ ಮರದ ಅಡಿಯಲ್ಲಿ ಸಭೆ ಸೇರಿದುವು. ಅನೇಕ ಸಲ ಒಬ್ಬೊಬ್ಬರೇ ಗೆಲ್ಲಲಾಗದ ಶತ್ರುವನ್ನು ಎಲ್ಲರೂ ಒಟ್ಟಾದರೆ ಒಗ್ಗಟ್ಟಿನಿಂದ ಸೋಲಿಸಿಬಿಡಬಹುದು. ಇದನ್ನು ಅರಿತ ಅಸಹಾಯಕರಾದ ಕಾಡುಪ್ರಾಣಿಗಳೆಲ್ಲಾ ಒಂದಾಗಿ ಸೇರಿದುವು. ಮಟಮಟ ಮಧ್ಯಾಹ್ನ. ಅದು ವನರಾಜ ಗೊರಕೆ ಹೊಡೆಯುತ್ತಾ ನಿದ್ದೆಯಲ್ಲಿ ಮುಳುಗಿರುವ ಸಮಯ.

Sri Vidyabharathi Book Centre, Sringeri

CC-O. In Public Domain. Digitized by eGangotri

ಆಲದ ಮರದಡಿಯಲ್ಲಿ ಸೇರಿದ್ದ ಪ್ರಾಣಿಗಳೆಲ್ಲಾ ಒಬ್ಬ ನಂಟನನ್ನೋ ಇನ್ನೊಬ್ಬ ಮಿತ್ರನನ್ನೋ, ಅಥವಾ ಇಬ್ಬರನ್ನೂ ಕಳೆದುಕೊಂಡಿದ್ದುವು. ಭಾಸುರಕನ ಕೋರೆಹಲ್ಲುಗಳಿಗೆ ಅವು ಆಹುತಿಯಾಗಿದ್ದುವು. ಪ್ರತಿಯೊಂದು ಪ್ರಾಣಿಯೂ ತನ್ನ ದುಃಖವನ್ನು ಒಂದಾದಮೇಲೊಂದು ಎದೆ ಕರಗುವಂತೆ ಸಭೆಯ ಮುಂದೆ ಹೇಳಿಕೊಂಡಿತು. ಅವುಗಳಿಗೆ ಸಾಧ್ಯವಿದ್ದರೆ ನಮ್ಮಂತೆ ಕಣ್ಣೀರು ಕರೆಯುತ್ತಿದ್ದುವು. ಆದರೆ ಪಶುಪ್ರಾಣಿಗಳು ಕಣ್ಣೀರು ಸುರಿಸಿ ತಮ್ಮ ವ್ಯಸನವನ್ನು ಹೊರಗೆಡವಿ ತೀರಿಸಿಕೊಳ್ಳಲಾರವು.

ಕರುಣೆ ಎಂಬುದೇ ತಿಳಿಯದ ಭಾಸುರಕನಿಗೆ ಏನು ಮಾಡುವುದು? ಅದೇ ಸಭೆಯಲ್ಲಿ ಎದ್ದಿದ್ದ ದೊಡ್ಡ ಪ್ರಶ್ನೆ. ಕೆಲವು ಪ್ರಾಣಿಗಳು ಸಿಟ್ಟಾಗಿ, ತಮ್ಮವರನ್ನು ಭಾಸುರಕ ಕೊಂದಂತೆ, ಹೇಗಾದರೂ ಮಾಡಿ, ಅದನ್ನೂ ಸಿಗಿದು ಮಾರಿಗೆ ಬಲಿಕೊಡಬೇಕು ಎಂದು ಅರಚಿದುವು! ಆದರೆ ಹೇಗೆ? ಅದು ಮಾತ್ರ ಯಾರಿಗೂ ಹೊಳೆಯುತ್ತಿಲ್ಲ.

ಸ್ವರ್ಗಕ್ಕೆ ಏರಿಬಿಟ್ಟರೆ ಸದಾ ಸುಖವಾಗಿರಬಹುದು ಎಂಬುದು ಎಲ್ಲರಿಗೂ ಗೊತ್ತು. ಆದರೆ ಸ್ವರ್ಗಕ್ಕೆ ಹಾದಿಯನ್ನು ಮಾತ್ರ ಯಾರೂ ಅರಿಯರು.

ಭಾಸುರಕ ಘರ್ಜಿಸಿದರೆ ಸಾಕು, ಬಿರುಗಾಳಿಯಲ್ಲಿ ಒಣ ಎಲೆಗಳು ತೂರಿಹೋಗುವಂತೆ ಕಾಡಿನಲ್ಲಿರುವ ಪ್ರಾಣಿಗಳೆಲ್ಲಾ ಚೆಲ್ಲಾಪಿಲ್ಲಿಯಾಗಿ ಚದುರಿಹೋಗುವುವು.

Sri Vidyabharathi Book Centre, Sringeri

CC-O. In Public Domain. Digitized by eGangotri

ಭಾಸುರಕ ಅಷ್ಟು ಭಯಂಕರ, ಅಷ್ಟು ಬಲಿಷ್ಠ !

ಕಾಡಿನ ಕಷ್ಟಜೀವಿಗಳೆಲ್ಲಾ ಅನೇಕ ಉಪಾಯಗಳನ್ನು ಚರ್ಚಿಸಿದುವು. ಕೊಲೆಪಾತಕನನ್ನು ಮುಗಿಸಿಬಿಡಲು ಒಂದೊಂದೂ ತನ್ನ ಸಲಹೆಯನ್ನು ಸಭೆಯ ಮುಂದೆ ಇಟ್ಟಿತು ! ಆದರೆ ಆ ರಾಕ್ಷಸನ ಮುಂದೆ ಯಾವುದೂ ನಡೆಯುವಂತೆ ಕಾಣಲಿಲ್ಲ. ಕೊನೆಗೆ ಒಂದು ಮುದಿ ನರಿ ಎದ್ದು ನಿಂತು ಒಂದು ಸಲಹೆ ಮಾಡಿತು: "ಹೇಗಾದರೂ ನಾವಿಷ್ಟು ಮಂದಿ ಇದ್ದೇವೆ, ಭಾಸುರಕ ಒಂಟಿ. ನಾವೆಲ್ಲಾ ಸೇರಿ ಕೇಳಿಕೊಂಡರೆ ಅವನು ನಮ್ಮ ಬೇಡಿಕೆಯನ್ನು ತಳ್ಳಿ ಹಾಕಲಾರ," ಎಂದಿತು.

ಭಾಸುರಕ ತಮ್ಮ ಕೋರಿಕೆಗೆ ಒಪ್ಪುವನೇ ಎಂಬುದೇ ಸಭೆಗೆ ಸಂಶಯ. ಆದರೆ ಒಪ್ಪುವುದೇ ಇಲ್ಲ ಎಂದೂ ಯಾರೂ ಖಂಡಿತವಾಗಿ ಹೇಳಲಾರರು. ಇನ್ಯಾವ ಮಾರ್ಗವೂ ಅವಕ್ಕೆ ತೋಚಲಿಲ್ಲ. ಪ್ರಯತ್ನ ಮಾಡಿಬಿಡೋಣ ಎಂದು ಪ್ರಾಣಿಸಭೆ ಕೊನೆಗೆ ತೀರ್ಮಾನ ಮಾಡಿತು.

ಮೃಗಗಳೆಲ್ಲಾ ಭಾಸುರಕನ ಗುಹೆಗೆ ಒಟ್ಟಾಗಿ ನಡೆದುವು. ಭಾಸುರಕನ ಗವಿ ಬೆಟ್ಟದ ತಪ್ಪಲಲ್ಲಿ ಒಂದು ಝರಿಯ ದಡದ ಮೇಲಿದೆ. ಮರ ಪೊದೆಗಳ ಹಿಂದೆ ಅದರ ಬಾಯಿ ಮರೆಯಾಗಿದೆ. ಅಲ್ಲೊಂದು ಗುಹೆಯಿದೆ; ಅದರಲ್ಲೊಂದು ಸಿಂಹ ಅವಿತುಕೊಂಡಿದೆ ಎಂದು ಯಾರಿಗೂ ಗೊತ್ತೇ ಆಗುವುದಿಲ್ಲ. ಆದರೆ ಸಿಂಹವಾಸನೆ ಹಿಡಿದೇ ಪ್ರಾಣಿಗಳ ಕೂಟ

Sri Vidyabharathi Book Centre, Sringeri

CC-O. In Public Domain. Digitized by eGangotri

ಈಗ ಅಲ್ಲಿಗೆ ಬಂದಿದೆ. ಒಂದೊಂದು ಪ್ರಾಣಿಗೂ ತನ್ನದೇ ಆದ ಬೇರೆ ಬೇರೆ ವಾಸನೆ. ಕಾಡುಮೃಗಗಳ ವಾಸನೆ ಕಾಡು ಮೃಗಗಳಿಗೇ ಗೊತ್ತು. ಅವುಗಳ ಮೂಗು ಬಹು ಚುರುಕು. ಗುಹೆಯೊಳಗಿಂದ ಈಗ ಬಂದು ಅಡರುತ್ತಿರುವ ಭಾಸುರಕನ ವಾಸನೆಯೇ ಪ್ರಾಣಿಗಳ ಗುಂಪನ್ನು ನಡುಗಿಸಿಬಿಟ್ಟಿತು!

ರಾಜದರ್ಶನಕ್ಕಾಗಿ ಕಾಡಿನ ಆ ಸಾಧು ಜೀವಿಗಳು ಕಾಯುತ್ತಾ ನಿಂತಿವೆ. ಸ್ವಲ್ಪ ಹೊತ್ತಿನಲ್ಲೇ ಎಲ್ಲಕ್ಕೂ ಬಹಳ ಹೊತ್ತು ಕಾದು ನಿಂತಿರುವಂತೆ ಅನಿಸಹತ್ತಿತು. ಕಾಯುತ್ತಿದ್ದಷ್ಟೂ ಭಯ ಏರುತ್ತಿದೆ. ಭಯ ಹೆಚ್ಚುಹೆಚ್ಚಾಗುತ್ತಾ ಪ್ರತಿಯೊಂದೂ ತಾನು ಹಿಂದೆ, ತಾನು ಹಿಂದೆ ಎಂದು ಗುಂಪಿನ ಹಿಂಭಾಗಕ್ಕೆ ಸರಿಯಲು ನುಗ್ಗಿ ಹೋರಾಡತೊಡಗಿದುವು. ಸಿಂಹರಾಜನಿಗೇನಾದರೂ ರೋಷ ಹತ್ತಿದರೆ, ಮುಂದಿರುವವರ ಗತಿ ಏನಾಗುವುದು ಎನ್ನುವುದು ಎಲ್ಲರಿಗೂ ಗೊತ್ತು!

ಈ ಒದ್ದಾಟದಲ್ಲಿ ಕಡೆಗೆ ಆನೆಯೂ ಕಾಡುಕೋಣವೂ ಮುಂದೆ ನಿಲ್ಲುವ ಹಾಗಾಯಿತು. ಈಗ ಜೀವಂತ ಕೋಟೆಯೊಂದು ಪ್ರಾಣಿಸಮೂಹವನ್ನು ಸುತ್ತಿ ಕಾಯುತ್ತಿರುವಂತೆ ಕಾಣುತ್ತಿದೆ. ಕಾಡುಕೋಣಕ್ಕೆ ಈ ಕಾರ್ಯವೇನೂ ಹೊಸದಲ್ಲ. ತನ್ನ ಮಕ್ಕಳುಮರಿಗಳನ್ನು ಕಾಯುವ ರೀತಿಯೇ ಅದು. ಮುದಿನರಿಯು ಆನೆಯ ಮುಂಗಾಲುಗಳ ಮಧ್ಯದಲ್ಲಿ ನುಸಿದು ಸಾವಿರಾರು ಕಿವಿಗಳನ್ನೆಣಿಸುತ್ತಾ ನಿಂತಿತು.

CC-O. Vidyaranya Documentation Centre. Bangalore.

CC-O. In Public Domain. Digitized by eGangotri

ಆನೆಯ ಭಾವಣೆ ಬಹಳ ಭದ್ರ; ಕಾಡುಕೋಣನ ಆಸರೆ ಗಿಂತ ಮೇಲು ಎಂದು ನರಿಗೆ ಗೊತ್ತಿತ್ತು. ಆನೆ ಭಾಸುರಕ ನಿಗಿಂತ ಬಲಶಾಲಿ; ಅದರ ಸೊಂಡಿಲು ಸಿಂಹವನ್ನು ದೂರ ಇಡಲು ಸಾಧ್ಯ. ಅದೂ ಅಲ್ಲದೆ ಆನೆ ಶಾಂತಜೀವಿ. ಶಕ್ತಿ ವಂತರಿಗೆ ಸಹನೆಯೂ ಹೆಚ್ಚು. ಆನೆ ತಾನಾಗಿ ಜಗಳಕ್ಕೆ ಯಾರೊಂದಿಗೂ ಹೋಗದು. ಏಕೆ, ಪುಟ್ಟ ಕಿರುಬ ಕಿರಿಚಿ ದರೆ, ಕಾಡುನಾಯಿ ಬೊಗಳಿದರೆ ಸಾಕು, ಫೀಳಿಡುತ್ತಾ, ಆ ಪುಟಾಣಿ ಪ್ರಾಣಿಗಳಿಗೆ ಭಯಪಟ್ಟು ಓಡುವುದು ಆನೆ. ಆದರೆ ಯಾರೇ ಆಗಲಿ, ತನಗೆ ಕಿರುಕುಳ ಕೊಟ್ಟರೆ, ಅಥವಾ ಅದರೊಡನೆ ಜಗಳ ಹೂಡಿದರೆ, ಆನೆ ಅದನ್ನು ಸೊಂಡಿಲಲ್ಲಿ ಸುತ್ತಿಹಿಡಿದು, ಮೇಲಕ್ಕೆತ್ತಿ ನೆಲಕ್ಕಪ್ಪಳಿಸಿ, ಮೂಳೆ ಮುರಿದು, ಕಾಲಲ್ಲಿ ತುಳಿದು, ನೆಲಸಮ ಮಾಡಿಬಿಡುವುದು! ಆನೆಯ ಶತ್ರುಗಳಿಗೆಲ್ಲಾ ಅದರ ಗುಣ, ಅದರ ಶಕ್ತಿ ಗೊತ್ತು!

ಕಾಡುಕೋಣನಾದರೋ, ಸದಾ ಜಗಳಕ್ಕೇ ಕಾಯುತ್ತಿರುವುದು. ಯಾರಾದರೂ ಕಣ್ಣಿಗೆ ಬಿದ್ದದ್ದೇ ತಡ, ತಲೆ ಬಾಗಿಸಿ, ತನ್ನ ಚೂಪಾದ ಬಾಗಿದ ಕೊಂಬುಗಳಿಂದ ತಿವಿಯಲು ತಯಾರಾಗಿ ನೆಲವನ್ನು ಗೊರಸುಗಳಿಂದ ಕೆತ್ತುತ್ತಾ, ಭುಸುಗುಟ್ಟುತ್ತಾ ನಿಲ್ಲುವುದು. ಎಲ್ಲಿಂದಾದರೂ ಅಪಾಯದ ಸದ್ದು, ವಾಸನೆ ಬಂದರೆ, ಅತ್ತಿತ್ತ ನೋಡದೆ, ತಿವಿಯಲು ಕೊಂಬುಗಳನ್ನು ಚಾಚಿ ನುಗ್ಗಿಬಿಡುವುದು

Sri Vidyabharathi Book Centre, Sringeri

CC-O. In Public Domain. Digitized by eGangotri

ಕೋಣ! ಅಂತಹ ಜೊತೆಗಾರನಿಂದ ಸ್ವಲ್ಪ ದೂರವಾಗಿರುವುದೇ ಒಳ್ಳೆಯದು ಎಂದು ಜಾಣ ನರಿ ತೀರ್ಮಾನಿಸಿತು.

ವನರಾಜ ಭಾಸುರಕ ಎದ್ದೇಳುವುದು ತಡವೇ ಆಯಿತು. ಸೂರ್ಯ ಮುಳುಗುವ ಸಮಯ. ಗವಿಯ ಬಾಗಿಲಿಗೆ ನಿಧಾನವಾಗಿ ಬಂದು ನಿಂತು ತನ್ನ ದೊಡ್ಡ ಬಾಯಿಬಿಟ್ಟು, "ಆ! ಹ್ಹ!" ಎಂದು ರಾಕ್ಷಸ ಬೆಕ್ಕಿನಂತೆ ಕೂಗು ಹಾಕುತ್ತಾ ಆಕಳಿಸಿತು. ಆ ಗುಹೆಯಂತಿದ್ದ ಬಾಯಲ್ಲಿನ ಕೋರೆ ದಾಡೆಗಳನ್ನು ಕಂಡೊಡನೆ ಕಾಡುಪ್ರಾಣಿಗಳು ಗುಂಪಿಗೆ ಗುಂಪೇ ನಡುಗುತ್ತಾ ಇನ್ನೊಂದು ಹೆಜ್ಜೆ ಹಿಂದಿಟ್ಟಿತು! ಭಾಸುರಕನಾದರೋ ಪ್ರಜೆಗಳೆಲ್ಲಾ ಒಟ್ಟಾಗಿ ಧೈರ್ಯದಿಂದ ತನ್ನ ಮುಂದೆ ಬಂದು ನಿಂತಿದ್ದನ್ನು ನೋಡಿದುದು ಇದೇ ಮೊದಲು. ಈ ಅಸಾಧಾರಣ ದೃಶ್ಯ ಅದನ್ನು ಬೆರಗುಗೊಳಿಸಿತು. ಆದರೆ, ರಾಜನಡತೆಗೆ ತಕ್ಕಂತೆ, ತನ್ನ ಒಳಮನಸ್ಸನ್ನು ಭಾಸುರಕ ಬಿಟ್ಟುಕೊಡಲಿಲ್ಲ. ಗಂಭೀರವಾಗಿ, ಠೀವಿಯಿಂದ, ನೀರು ಕುಡಿಯಲು ಪ್ರತಿ ಸಂಜೆಯೂ ಹೋಗುವಂತೆ, ನಿಧಾನವಾಗಿ ನದಿಯೆಡೆಗೆ ಇಳಿದು ಹೋಯಿತು.

ಪಾನ ಮುಗಿದ ನಂತರ ಹಿಂದಿರುಗಿ, ಕೇಸರ ತುಂಬಿದ ತಲೆ ಎತ್ತಿ, ಪ್ರಜೆಗಳ ಗುಂಪನ್ನು ಎದುರಿಸಿ, ಭಾಸುರಕ ದರ್ಪದಿಂದ ನಿಂತಿತು. ತಾನು ಮಾತೇ ಆಡದೆ ಪ್ರಜೆಗಳು ತಮ್ಮ ಅಹವಾಲನ್ನು ಅರಿಕೆ ಮಾಡಿಕೊಳ್ಳಲು ಅದು ಅವಕಾಶ ಕೊಟ್ಟಿತು.

Vidyabharathi Book Centre, Sringeri

CC-O. In Public Domain. Digitized by eGangotri

ಮುಂದೆ ನಿಂತಿದ್ದ ಆನೆ ಮತ್ತು ಕಾಡುಕೋಣಗಳಲ್ಲಿ ಕೋಣ ಕೆಚ್ಚಿನವು. ಅದಲ್ಲದೆ, ಭಾಸುರಕ ತನ್ನ ಸಣ್ಣ ತಮ್ಮ, ನನ್ನು ಕೊಂದಿದ್ದುದನ್ನು ಅದು ಮರೆತಿರಲಿಲ್ಲ. ಮೋಸದಿಂದ ಸದ್ದೇ ಇಲ್ಲದೆ ಹಿಂದಿನಿಂದ ಕಳ್ಳ ಬೆಕ್ಕಿನಂತೆ ಹೆಜ್ಜೆ ಹಾಕಿ ಕೊಂಡು ಬಂದು, ಹಾರಿ, ಮುರಿಕೋಣದ ಕತ್ತನ್ನು ಕಚ್ಚಿ, ಒಂದೇ ಏಟಿಗೆ ಸಿಂಹವು ಮುರಿದುಹಾಕಿತ್ತು. ಆ ಕೋಪ ಕೋಣನ ಮನಸ್ಸಿನಲ್ಲಿ ಕುದಿಯುತ್ತಿದೆ. ಆದರೆ ಹೊಟ್ಟೆಯಲ್ಲಿ ಇನ್ನೊಂದು ಕಡೆ ಭಯವೂ ಪೀಡಿಸುತ್ತಿದೆ.

"ಸ್ವಾಮೀ," ಎಂದು ರಾಜನನ್ನು ಕುರಿತು ಕೋಣ ಕೀರಲು ಧ್ವನಿಯಿಂದ ಕೂಗಿತು. ಅಷ್ಟು ದೊಡ್ಡ ಪ್ರಾಣಿಯ ಆ ಶಿಳ್ಳು ಧ್ವನಿ ವಿಲಕ್ಷಣವಾಗಿ ಕೇಳಿಸಿತು. "ನೀವು ನಮ್ಮ ವನಕ್ಕೆಲ್ಲಾ ರಾಜರು. ನಾವು ವಿಧೇಯರಾದ ಪ್ರಜೆಗಳು. ತಮ್ಮ ಇಷ್ಟವನ್ನು ಚಾಚೂ ತಪ್ಪದೆ ನಡೆಸುತ್ತಿದ್ದೇವೆ. ಮುಂದೆ ನಡೆಸಲೂ ಸಿದ್ಧ," ಎಂದು ಒದರಿತು ಕೋಣ.

ವನರಾಜ ಭಾಸುರಕ ಗತ್ತಿನಿಂದ ಒಂದು ಸಾರಿ ತಲೆ ದೂಗಿತು.

"ಪ್ರತಿದಿನವೂ ನಮ್ಮಲ್ಲಿ ಒಬ್ಬರನ್ನು ಮಾತ್ರ ತಿಂದು ತಾವು ಹಸಿವು ತೀರಿಸಿಕೊಳ್ಳಬಹುದು. ಬಹು ಮುಂದಿಯನ್ನು ಅನಾವಶ್ಯಕವಾಗಿ ಏಕೆ ಕೊಲ್ಲಬೇಕು?" ಎಂದಿತು ಕೋಣ ಒರಟೊರಟಾಗಿ. ಬಲಿಷ್ಠರಿಗೆ ನಯ ನಾಜೂಕು ಸ್ವಲ್ಪ ಕಡಿಮೆ.

Sri Vidyabharathi Book Centre, Sringeri

CC-O. In Public Domain. Digitized by eGangotri

"ಚಕ್ರವರ್ತಿಗಳಿಗೆ ಅದು ತರವಲ್ಲ, ಮಹಾಸ್ವಾಮೀ," ಎಂದು ಕೂಗಿತು, ಆನೆಯಡಿಯಲ್ಲಿ ಸುರಕ್ಷಿತವಾಗಿ ನಿಂತಿದ್ದ ಮುದಿ ನರಿ.

"ಏಕಲ್ಲ?" ಎಂದು ಸ್ವಲ್ಪ ಅಸಮಾಧಾನದಿಂದಲೇ ಸಿಂಹ ರಾಜ ಗುರುಗುಟ್ಟಿತು.

"ಏಕೆಂದರೆ, ರಾಜನಂತೆ ಪ್ರಜೆಗಳು ನಡೆಯುತ್ತಾರೆ," ಎಂದಿತು ಧೈರ್ಯ ತಂದುಕೊಂಡ ನರಿ. "ಅರಸ ದುಂದುಗಾರನಾದರೆ ಪ್ರಜೆಗಳೂ ದುಂದುಗಾರರಾಗುವರು; ಆಳುವವರು ಅಜಾಗರೂಕರಾದರೆ ಜನರೂ ಅಜಾಗರೂಕರಾಗುವರು; ರಾಜ ನೀಚ ಕಾರ್ಯಗಳಿಗಿಳಿದರೆ, ಪ್ರಜೆಗಳು ದುರ್ಮಾರ್ಗದಲ್ಲಿ ರಾಜನಿಗಿಂತ ಮುಂದೋಡುವರು; ಅಂತಹ ರಾಜ್ಯ ಬೇಗನೆ ಬರಿದಾಗಿಬಿಡುವುದು," ಎಂದಿತು ನರಿ.

ಭಾಸುರಕನಿಗೆ ನರಿಯ ಮಾತು ಸರಿ ಎನಿಸಿತು; ಏನೂ ಹೇಳಲಾಗಲಿಲ್ಲ.

"ಒಳ್ಳೆಯ ಗುಣಗಳನ್ನು ಬಿಟ್ಟು ಮಿಕ್ಕೆಲ್ಲದರಲ್ಲೆಲ್ಲಾ ಸಾಮಾನ್ಯ ಜನರು ಅರಸನನ್ನು ಮೀರಿಸುವರು," ಎಂದು ಮುಂದುವರಿಸಿತು ನರಿ. ಸಿಂಹದ ಮೌನದಿಂದ ಉತ್ತೇಜನಗೊಂಡು "ಆದ್ದರಿಂದಲೇ ಸ್ವಾಮೀ, ಆಳರಸರು ಪ್ರಜೆಗಳಿಗಿಂತ ಉತ್ತಮರಾಗಿರಬೇಕು. ಹಾಗಾಗದಿದ್ದರೆ ರಾಮರಾಜ್ಯವಾಗಿದ್ದುದು ರಾವಣರಾಜ್ಯವಾಗಿಬಿಡುವುದು ಎಂದು ನಮ್ಮ ಹಿರಿಯರು ಎಚ್ಚರಿಸಿದ್ದಾರೆ," ಎಂದು ಅರಸನಿಗೆ ಅರಿಕೆ ಮಾಡಿಕೊಂಡಿತು.

Sri Vidyabharathi Book Centre, Sringeri

 CC-O. In Public Domain. Digitized by eGangotri

"ರಾಜಾ, ನಮ್ಮಲ್ಲಿ ಒಬ್ಬರು ಪ್ರತಿದಿನ ಬೆಳಿಗ್ಗೆ ನಿಮ್ಮ ಗುಹೆಯ ಬಾಗಿಲಿಗೇ ಬಂದು ನಿಲ್ಲಲು ನಿಶ್ಚಯಿಸಿದ್ದೇವೆ," ಎಂದು ಅರಚಿತು ಕೋಣ. "ನಿಮ್ಮ ಆಹಾರ ತಾನಾಗಿ ತಾನೇ ನಿಮ್ಮ ಬಾಯಿಗೆ ಬರುವುದರಿಂದ ನಿಮಗೆ ಬೇಟೆಯಾಡುವ ಕಷ್ಟವೇ ಇಲ್ಲ," ಎಂದು ನೆಲವನ್ನು ಕಾಲಿನಿಂದ ಕೆದಕುತ್ತಾ ಸ್ವಲ್ಪ ಗಡುಸಾಗಿ ಅಬ್ಬರಿಸಿತು ಕೋಣ.

"ತಾವು ಈ ಏರ್ಪಾಟಿಗೆ ಒಪ್ಪಿ, ನಮ್ಮ ನಮ್ಮ ಸರದಿ ಬರುವ ತನಕ ನಮಗೆ ಜೀವದಾನ ಮಾಡಬೇಕು," ಎಂದು ಬೇಡಿತು ನರಿ. "ಈ ರೀತಿ ನಡೆಸಿಕೊಟ್ಟರೆ, ಮಹಾಸ್ವಾಮಿ, ಮಿತವಾಗಿ ಖರ್ಚು ಮಾಡುವ ರೈತನ ಕಣಜದಲ್ಲಿ ಧಾನ್ಯ ಯಾವಾಗಲೂ ತುಂಬಿರುವಂತೆ, ನಮ್ಮ ಕಾಡು ಯಾವಾಗಲೂ ಪ್ರಾಣಿಗಳಿಂದ ತುಂಬಿರುವಂತಾಗುವುದು. ಗೂಡಿನಲ್ಲಿ ಕೂಡಿಟ್ಟ ಕಾಳನ್ನು ಇರುವೆ ಒಂದೊಂದಾಗಿ ತಿನ್ನುವಂತೆ, ತಾವು ನಮ್ಮನ್ನು ಒಬ್ಬೊಬ್ಬರನ್ನಾಗಿ ಭಕ್ಷಿಸಿ ತೃಪ್ತಿಪಡ ಬಹುದು," ಎಂದು ನರಿ ಅತಿವಿನಯದಿಂದ ತನ್ನ ಸಲಹೆ ಯನ್ನು ರಾಜನ ಮುಂದಿಟ್ಟಿತು.

ಈ ಕೋರಿಕೆಯನ್ನು ರಾಜ ಒಪ್ಪುವನೊ ಬಿಡುವನೊ, ಎಂದು ಕಾತುರದಿಂದ ಕಾಯುತ್ತಿದೆ ಪ್ರಾಣಿಗಳ ಗುಂಪು.

ಭಾಸುರಕ ಯೋಚಿಸತೊಡಗಿತು. ರಾಜರು ಎಂದೂ ಥಟ್ಟನೆ ಉತ್ತರ ಕೊಡುವುದಿಲ್ಲ. ಈ ಸಲಹೆಗೆ ಒಪ್ಪಿದರೆ ತನ್ನ ಚೆಲ್ಲಾಟವೆಲ್ಲಾ ನಿಲ್ಲಬೇಕಾಗುವುದು. ಪ್ರಾಣಿಗಳನ್ನು

CC-O. In Public Domain. Digitized by eGangotri

ಮನಬಂದಂತೆ ಬೇಟೆಯಾಡಿ ಇನ್ನು ಮುಂದೆ ಕೊಲ್ಲುವುದ ಕ್ಕಾಗುವುದಿಲ್ಲ. ಆದರೆ, ಒಪ್ಪದಿದ್ದರೆ? ಎದುರಾಗಿ ಮುಂದೆ ಬಂದು ನಿಂತಿರುವ ಪ್ರಾಣಿಗಳೆಲ್ಲಾ ದಂಗೆ ಎದ್ದುಬಿಡ ಬಹುದು! ಜನತೆ ಒಟ್ಟಾಗಿಬಿಟ್ಟರೆ ಏನು ಮಾಡುವುದಕ್ಕೂ ಹೇಸುವುದಿಲ್ಲ. ಗೂಳ್ಯಕ್ಕೆ ತಲೆ ಇಲ್ಲ. ಗುಂಪಿನ ಕೋಪ ಬಿರುಗಾಳಿಯಂತೆ: ಕಣ್ಣು ಮುಚ್ಚಿ ಲೋಕವನ್ನೆಲ್ಲಾ ಉರುಳಿಸಿಬಿಡುವುದು. ಆನೆಯ ಸೊಂಡಿಲು, ಕೋಣನ ಕೊಂಬುಗಳ ಮುಂದೆ ತಾನೇನೂ ನಿಲ್ಲುವ ಹಾಗಿಲ್ಲ.

'ಈ ಸಲಹೆಯಲ್ಲೂ ಒಂದು ಉಪಯೋಗವಿದೆ,' ಎಂದು ಕೊಂಡು ಮನಸ್ಸು ಇಳಿಬಿಡಹತ್ತಿತು ಸಿಂಹರಾಜ. ಹೇಗಾದರೂ ಸಿಂಹಿಣಿಯನ್ನು ಕಳೆದುಕೊಂಡಿದ್ದೇನೆ. ಬೇಟೆಯನ್ನು ಕೊಂದು ನನಗೆ ತಂದುಹಾಕುವವರಿಲ್ಲ. ಪ್ರಾಣಿಗಳ ಬೇಡಿಕೆಗೆ ಈಗ ನಾನು ಒಪ್ಪಿದ್ದೇ ಆದರೆ, ನಾನೇ ಬೇಟೆಯಾಡಿ ನಾನೇ ತಿನ್ನುವ ಅಪಮಾನವೇ ತಪ್ಪುವುದು,' ಎಂದು ಸಮಾಧಾನ ತಂದುಕೊಂಡಿತು ಭಾಸುರಕ.

ಸಿಂಹಜಾತಿಯ ಪದ್ಧತಿ—ನಮ್ಮಲ್ಲಿ ಹೆಂಗಸು ಅಡಿಗೆ ಮಾಡಿ ಬಡಿಸಿ, ಗಂಡಸು ಉಣ್ಣುವಂತೆ—ಹೆಣ್ಣು ಸಿಂಹ ಬೇಟೆಯನ್ನು ಹುಡುಕಿ ಕೊಲ್ಲಬೇಕು, ನಂತರ ಗಂಡು ಸಿಂಹ ಬಂದು ಸಿದ್ಧವಾಗಿರುವ ಊಟಕ್ಕೆ ಮೊದಲು ಬಾಯಿಹಾಕ ಬೇಕು. ಆದರೆ ಸ್ವಲ್ಪ ಕಾಲದ ಹಿಂದೆ ಭಾಸುರಕನ ರಾಣಿ ತೀರಿಹೋಗಿದ್ದಿತ್ತು.

Sri Vidyabharathi Book Centre, Sringeri

CC-O. In Public Domain. Digitized by eGangotri

ಕೊನೆಗೆ ಪ್ರಜೆಗಳಿಗೆ ತಾನು ದೊಡ್ಡ ವರ ಕೊಡುತ್ತಿರುವಂತೆ, "ಒಳ್ಳೆಯದು," ಎಂದು ತಲೆದೂಗಿತು. "ಆದರೆ, ನನ್ನ ಊಟ ರಾತ್ರಿಯ ವೇಳೆ. ಹಗಲು ನನ್ನ ನಿದ್ದೆ. ನನ್ನ ಊಟ ಸಾಯಂಕಾಲ ಬಂದು ಗುಹೆಯ ಬಾಗಿಲಲ್ಲಿ ಕಾಯುತ್ತಿರಲಿ, ನಾನು ಹೊರಗೆ ಬಂದು ಅದನ್ನು ಭಕ್ಷಿಸುವ ತನಕ," ಎಂದು ಘರ್ಜಿಸಿತು ವನರಾಜ.

"ಅಪ್ಪಣೆ! ಓಹೋ! ಅಗತ್ಯವಾಗಿ! ಮಹಾಸ್ವಾಮಿ!" ಎಂದು ಎಲ್ಲಾ ಪ್ರಾಣಿಗಳೂ ಒಂದೇ ಧ್ವನಿಯಿಂದ ಕೂಗಿಟ್ಟುವು. ಮೃಗಗಳಿಗೆಲ್ಲಾ ಬಹು ಸಂತೋಷ! ಕ್ರೂರ ರಾಜ ತೋರಿಸಿದ ಅಲ್ಪ ದಯೆಗೆ ಅಪಾರ ಕೃತಜ್ಞತೆ ಆ ಬಡ ಪ್ರಜೆಗಳಿಗೆ. ಭಾಸುರಕನ ಹಿಂದಿನ ಹಿಂಸೆಗಳನ್ನೆಲ್ಲಾ ಅವು ಮರೆತೇಬಿಟ್ಟುವು. ತಮ್ಮ ಒಡೆಯ ನಿಜವಾಗಲೂ ಮಹಾನುಭಾವ, ಕರುಣಾಳು ಎಂದು ಹೊಗಳುತ್ತಾ ಸಂಭ್ರಮದಿಂದ ಆ ಬಡಪಾಯಿಗಳು ಹಿಂದಿರುಗಿದುವು.

"ಆದರೆ, ಮರೆಯಬೇಡಿ," ಎಂದು ಘರ್ಜಿಸಿತು ಸಿಂಹ. ಆ ನಡುಗಿಸುವ ಆರ್ಭಟ ಕೇಳಿದೊಡನೆ, ಅಂಜುಬುರುಕ ಪ್ರಾಣಿಗಳು ಹಾರಿ, ಸಿಂಹವು ಮುಂದೆ ಹೇಳುವುದನ್ನು ಕೇಳಲು ನಿಲ್ಲದೆಯೇ ಕಾಲಿಗೆ ಬುದ್ಧಿ ಹೇಳಿದುವು! "ನನ್ನ ಗುಹೆಯಿಂದ ನಾನು ಕದಲುವುದಿಲ್ಲ. ಪ್ರತಿ ದಿನ ಸಂಜೆ ನಿಮ್ಮಲ್ಲಿ ಒಬ್ಬರು ಕಾಲಕ್ಕೆ ತಪ್ಪದೆ ಬರದಿದ್ದರೆ ಎಲ್ಲರನ್ನೂ ತೊಡೆದುಹಾಕಿಬಿಡುತ್ತೇನೆ! ನೆನಪಿರಲಿ!" ಎಂದು ಕಾಡು ನಡುಗುವಂತೆ ಭಾಸುರಕ ಅಬ್ಬರಿಸಿತ್ತು.

Sri Vidyabharathi Book Centre, Sringeri

CC-O. In Public Domain. Digitized by eGangotri

"ಇಲ್ಲ, ಇಲ್ಲ, ಎಂದಿಗೂ ತಪ್ಪುವುದಿಲ್ಲ!" ಎಂದು ಕೂಗಿ ಕೊಂಡು ಎಲ್ಲಾ ಪ್ರಾಣಿಗಳೂ ಪಲಾಯನ ಮಾಡಿದುವು.

ಭಾಸುರಕನ ಪ್ರಜೆಗಳು ಕೊಟ್ಟ ಮಾತನ್ನು ತಪ್ಪದೆ ನಡೆ ಸುತ್ತಾ ಬಂದುವು. ಇಲ್ಲದಿದ್ದರೆ, ಒಬ್ಬನ ಸಾವಿಗೆ ಹಿಂಜರಿ ದರೆ, ಅನೇಕರಿಗೆ ಪೀಡೆ.

ಮೊದಮೊದಲು ಮುದಿ ಪ್ರಾಣಿಗಳು ತಮ್ಮ ಜೀವ ಕೊಡಲು ಮುಂದೆ ಬಂದುವು. ಅವಾದಮೇಲೆ, ಜೀವನದಲ್ಲಿ ಜುಗುಪ್ಸೆಯಾಗಿದ್ದವು ಒಂದೊಂದಾಗಿ ಭಾಸುರಕನ ಬಾಯಿಗೆ ತುತ್ತಾದುವು. ಅವೂ ಮುಗಿದ ಮೇಲೆ, ತಮ್ಮ ಮರಿಗಳು ಆದಷ್ಟು ಕಾಲ ಉಳಿಯಲಿ ಎಂಬ ಆಸೆಯಿಂದ ಕೆಲವು ತಾವೇ ತಾವಾಗಿ ಭಾಸುರಕನಿಗೆ ಆಹುತಿಯಾಗಲು ಮುಂದೆ ಬಂದುವು.

ಸಿಂಹರಾಜನಿಗಾದರೋ ಬಹು ಖುಶಿ. ಸಾಗರದಲ್ಲಿ ಸಣ್ಣ ಮೀನುಗಳು ತಿಮಿಂಗಿಲದ ತೆರೆದ ಬಾಯಿಗೆ ತೇಲಿ ಹೋಗು ವಂತೆ ದಿನಾ ಹಬ್ಬದ ಊಟ ನೆಟ್ಟಗೆ ಹೊಟ್ಟೆಗೇ ಇಳಿದು ಹೋಗುತ್ತಿದೆ. ಈಗ ಪಂಜವನ್ನು ಕೂಡ ಎತ್ತಬೇಕಿಲ್ಲ ಭಾಸುರಕ. ಹೀಗೆ ಸ್ವಲ್ಪ ಕಾಲದಲ್ಲಿಯೇ ಕೆಲಸ ಮಾಡದೆ ತಿಂದು ತೇಗುವವರ ಗತಿ ಸಿಂಹಕ್ಕೂ ಬಂತು. ಕೊಬ್ಬಿ ಸೋಮಾರಿಯಾಯಿತು ಸಿಂಹ. ಬೇಟೆ ಆಡುವ ಅಭ್ಯಾಸವೇ ಮರೆತುಹೋಗಿ ಮೈ ಉಬ್ಬಿತು; ಬುದ್ಧಿ ಮಂದವಾಯಿತು.

ಸ್ವಲ್ಪ ಕಾಲದ ನಂತರ ಕಾಡಿನ ಮುದಿ ಪ್ರಾಣಿಗಳೆಲ್ಲಾ ತೀರಿ

Sri Vidyaranya Book Centre, Shimoga

CC-O. In Public Domain. Digitized by eGangotri

ಹೋದುವು. ಈಗ ಭಾಸುರಕನಿಗೆ ಬಲಿಯಾಗುವ ಸರದಿ ತರುಣರ ಪಾಲಿಗೆ ಬಂತು. ಅನೇಕರು ಒಂದು ಕೂಗೂ ಇಡದೆ, ಇದು ತಮ್ಮ ಹಣೆಯ ಬರಹ ಎಂದು ತೆಪ್ಪನೆ ಪ್ರಾಣ ಕಳೆದು ಕೊಂಡುವು. ಆದರೆ ಭಯ ಬಹು ಜನರಲ್ಲಿ ಪುಕ್ಕಲು ಉಂಟುಮಾಡಿದರೆ, ಕೆಲವರಲ್ಲಿ ದಿಟ್ಟತನವನ್ನು ಹುಟ್ಟಿಸು ತ್ತದೆ. ಕೇಡಿಗ ಭಾಸುರಕನ ರಾಜ್ಯದಲ್ಲಿ ಒಂದು ಅತಿ ಸಣ್ಣ ಪ್ರಾಣಿಯಲ್ಲಿ ಹಾಗೇ ಆಯಿತು. ಕಾಡುಮೃಗಗಳಲ್ಲೆಲ್ಲ ಅತ್ಯಂತ ಚಾಲಾಕಿನ ಚೀಟು ಒಂದಕ್ಕೆ ಆ ಕೆಚ್ಚು ಎದ್ದಿತು! ಚೋಟಾರಿ ಮೊಲವೇ ಅದು; ಅದರ ಹೆಸರು ಶಶಿ.

ಶಶಿಯ ಮನೆ ನೆಲದಡಿಯಲ್ಲಿ ಕೊರೆದಿದ್ದ ಒಂದು ಬಿಲ. ಅಲ್ಲಿ ತನ್ನ ಹೆಂಡತಿ ಮಕ್ಕಳೊಡನೆ ಅದು ಬಹುಕಾಲ ಸುಖ ವಾಗಿ ವಾಸಿಸುತ್ತಿತ್ತು. ಆದರೆ ಸುಖ ಎಂದೆಂದಿಗೂ ಶಾಶ್ವತವೇ? ಕೊನೆಗೆ ಒಂದು ದಿನ ಭಾಸುರಕನಿಗೆ ತುತ್ತಾ ಗುವ ಸರದಿ ಶಶಿಗೂ ಬಂದಿತು! ಶಶಿ ಬಹು ವ್ಯಸನದಿಂದ ಬಿಲವನ್ನು ಬಿಟ್ಟು ಕಾಲು ಕಿತ್ತಿತು. ಸಂಸಾರ ಸಂತೋಷ ದಿಂದ ತುಂಬಿದ್ದರೆ ಪ್ರಿಯ ಬಂಧುಗಳನ್ನು ತೊರೆಯುವುದು ಕಷ್ಟ.

ತನ್ನನ್ನು ಬಿಡಲಾಗದೆ ನಿಂತಿದ್ದ ಪ್ರಿಯ ಪತ್ನಿಯನ್ನು ಸಮಾಧಾನ ಮಾಡುತ್ತಾ, "ನಾನು ಮುಂಚೆ ಹೋಗುವುದು ಒಳ್ಳೆಯದು, ಪ್ರಿಯೆ. ನೀನು ಸತ್ತು ಹೋದರೆ ಮಕ್ಕಳಿಗೆ ಹೆಚ್ಚು ದುಃಖ," ಎಂದಿತು ಶಶಿ.

Sri Vidyabharathi Book Centre, Sringeri

CC-O. In Public Domain. Digitized by eGangotri

"ಇಲ್ಲ, ಇಲ್ಲ. ನಿನ್ನ ಮೇಲೆ ಮಕ್ಕಳಿಗೆ ಬಹು ಪ್ರೀತಿ. ತಂದೆ ತೀರಿ ಹೋದರೆ ಮಕ್ಕಳಿಗೆ ಲೋಕದಲ್ಲಿ ಬಹು ಕಷ್ಟ," ಎಂದಿತು ಹೆಣ್ಣು ಮೊಲ.

"ಅದು ನಿಜ. ಆದರೆ ತಾಯಿ ಇರುವ ಮಕ್ಕಳು ತಂದೆ ಇಲ್ಲದ ಮಕ್ಕಳಷ್ಟು ಅನಾಥರಲ್ಲ," ಎಂದು ಹೆಂಡತಿಯನ್ನು ಸಂತೈಸಿತು. ಮಕ್ಕಳಿಗೆಲ್ಲಾ ಸುತ್ತ ಕಾಡಿನಲ್ಲಿ ತುಂಬಿರುವ ಶತ್ರುಗಳಿಂದ ಎಚ್ಚರವಾಗಿರುವಂತೆ ಬುದ್ಧಿ ಹೇಳಿತು. ನರಿ, ತೋಳ, ಗೂಬೆ, ಗಿಡಗಗಳಿಂದ ತಪ್ಪಿಸಿಕೊಳ್ಳುವ ಉಪಾಯ ಗಳನ್ನು ಮತ್ತೆಮತ್ತೆ ಅದು ಮಕ್ಕಳಿಗೆ ತೋರಿಸಿಕೊಟ್ಟಿತು.

"ಬೆಳೆದ ಹುಲ್ಲು, ದಟ್ಟವಾದ ಪೊದೆಗಳಲ್ಲಿ ನುಸಿದು ಮಾಯವಾಗಿ ಬಿಡಬೇಕು ನೀವುಗಳು," ಎಂದು ಹೇಳಿ ಕೊಟ್ಟಿತು ಶಶಿ. "ಬಿಲ ಹತ್ತಿರವೇ ಇದ್ದರೆ ನೆಲದೊಳಕ್ಕೆ ನುಗ್ಗಿಬಿಡಿ. ವೈರಿಯನ್ನು ಕಂಡೊಡನೆ—ಏಕೆ, ಶತ್ರುವಾಸನೆ ಬಂದೊಡನೆ—ಪರಾರಿಯಾಗಬೇಕು." ಹೀಗೆ ಮೊಲದ ಗುಟ್ಟುಗಳನ್ನೆಲ್ಲಾ ಅವಸರವಸರವಾಗಿ ಶಶಿ ಮಕ್ಕಳಿಗೆಲ್ಲಾ ತಿಳಿಸಿಕೊಟ್ಟಿತು.

ಕೊನೆಗೆ ತಂದೆ ಮೊಲ ಆ ಬಿಲವನ್ನು ಬಿಡಲಾರದೆ ಬಿಟ್ಟು ಹೊರಟಿತು. ಚಿಗರೆಯಂತೆ ಹಾರಿ ನೆಗೆದು ಕುಪ್ಪಳಿಸುವ ಶಶಿಗೆ ಈಗ ಕಾಲೇ ಮುಂದೆ ಹೋಗದು. ಎದೆಯಲ್ಲಿ ಅಷ್ಟು ದುಃಖ. ಮನಸ್ಸು ಮನೆಯ ಕಡೆ ತುಯ್ಯುತ್ತಿದೆ! ಸಿಂಹದ ಗವಿಯ ಕಡೆಗೆ ಕಾಲನ್ನು ಎಳೆಯಬೇಕಾಯಿತು. ಇನ್ನೂ

CC-O. Vidyanidhi Book Trust Collection.

CC-O. In Public Domain. Digitized by eGangotri

ಯೌವನ; ಹೆಂಡತಿ ಮಕ್ಕಳಿಗೆ ಶಶಿಯ ಮೇಲೆ ತುಂಬಾ ವಿಶ್ವಾಸ. ಅವುಗಳ ಮೇಲೆ ಅದಕ್ಕೆ ಅಪಾರ ಪ್ರೀತಿ. 'ಎಲ್ಲಾ ಕಟ್ಟುಗಳಿಗಿಂತ ಪ್ರೀತಿಯ ಕಟ್ಟು ಅತಿ ಗಟ್ಟಿ: ಬಿಡಿಸಿಕೊಳ್ಳುವುದು ಅಸಾಧ್ಯ!' ಎಂದು ಶಶಿಗೆ ಈಗ ಅನ್ನಿಸತೊಡಗಿತು.

ನಿಧಾನವಾಗಿ, ಮನಸ್ಸಿಲ್ಲದ ಮನಸ್ಸಿನಿಂದ ಶಶಿ ಕಾಲಿಡುತ್ತಿದೆ. ಆಗ ವಸಂತ ಋತು. ಈ ಕಾಲದಲ್ಲಿ ಜೀವದಾಸೆ, ಹುಮ್ಮಸ್ಸು, ಇನ್ನೂ ಹೆಚ್ಚು; ಅಂಥ ಸಮಯದಲ್ಲಿ ಜೀವ ಬಿಡಲು ಇನ್ನೂ ಕಷ್ಟ.

ಸೂರ್ಯ ಹಸನ್ಮುಖನಾಗಿ ಬೆಳಗುತ್ತಿದ್ದಾನೆ. ಶಶಿಯ ಸುತ್ತಮುತ್ತಲೂ ಗಿಡ ಮರಗಳು ಸೊಂಪಾಗಿ ಬೆಳೆದಿವೆ. ಪಶುಪಕ್ಷಿಗಳು ಉಲ್ಲಾಸದಿಂದ ನಲಿಯುತ್ತಿವೆ. ಭೂಮಿಯ ಮೇಲೆಲ್ಲಾ ಹಸುರು ಸುಪ್ಪತ್ತಿಗೆ ಹಾಸಿದೆ. ಮಳೆಯಿಂದ ತೊಳೆದು ಮೆರುಗುತ್ತಿದೆ ಭೂಮಿ. ಕೆಂಪು ನೀಲಿ ಚಿನ್ನ ಬೆಳ್ಳಿ ಬಣ್ಣಗಳ ಹೂಗಳು, ಆಕಾಶದಲ್ಲಿ ನಕ್ಷತ್ರಗಳು ಬೆಳಗುವಂತೆ, ಎಲ್ಲೆಲ್ಲೂ ಚೆಲ್ಲಿವೆ. ಮಳೆ ಹನಿಗಳು ಬಿಸಿಲಿನಲ್ಲಿ ವಜ್ರದ ಕಿಡಿಗಳಂತೆ ಕಾಮನಬಿಲ್ಲಿನ ಏಳು ರಂಗುಗಳನ್ನೂ ಎರಚುತ್ತಿವೆ.

ಹುಲ್ಲು ಹೂವುಗಳಿಂದ ಬರುತ್ತಿರುವ ಸುವಾಸನೆಗಳು, ಮಕ್ಕಳು ಸಂಗಾತಿಗಳೊಡನೆ ತಾನು ಆಡುತ್ತಿದ್ದ ಆಟಗಳ ನೆನಪುಗಳನ್ನು ಶಶಿಯ ಮನಸ್ಸಿನಲ್ಲಿ ಅಲೆಗಳಂತೆ ಬಲವಾಗಿ ಎಬ್ಬಿಸತೊಡಗಿದುವು. ಆ ಆಟಪಾಟಗಳೆಲ್ಲಾ, ಸಂತೋಷ ಸಂಭ್ರಮಗಳೆಲ್ಲಾ ಇನ್ನು ಮುಗಿದುವು! ಎದೆ ಒಡೆಯು

Sri Vidyabharathi Book Centre, Sringeri

CC-O. In Public Domain. Digitized by eGangotri

ವಷ್ಟು ದುಃಖದಿಂದ ಶಶಿ ಮುಂದಕ್ಕೆ ಕಾಲಿಡತೊಡಗಿತು. ಹಾಗೇ ಹೋಗುತ್ತಿರುವಾಗ, ಥಟ್ಟನೆ ಶಶಿ, ಉದ್ದವಾದ ತನ್ನ ಹಿಂಗಾಲುಗಳ ಮೇಲೆ ಎದ್ದು ನಿಂತುಬಿಟ್ಟಿತು! ನೀಳವಾದ ಅದರ ಕಿವಿಗಳೂ ಹಾಗೆಯೇ ನೆಟ್ಟಗೆ ಎದ್ದುನಿಂತಿವೆ. ಶಶಿ ಈಗ ಪುಟಾಣಿ ಕಾಂಗರೂವಿನಂತೆ ಕಾಣುತ್ತಿದೆ. ತಲೆ ಎತ್ತಿ ಆಕಾಶ ನೋಡಿದಾಗ, ಮುಂಜಿನ ಬೆಟ್ಟಗಳಂತೆ ಬಿಳೀ ಮೋಡಗಳು ತೇಲಿಹೋಗುತ್ತಿವೆ. ಆ ಬೆಟ್ಟಗಳಲ್ಲೊಂದರ ಮೇಲೆ ಭೂತಾಕಾರವಾದ ಒಂದು ಮೊಲ ಕೂತಿದೆ! ತನ್ನಂತೆಯೇ ಇದೆ; ಆದರೆ ಅದು ಭಾರೀ, ಬಲು ಭಾರೀ ಮೊಲ! ಭಾಸುರಕನಿಗಿಂತ ಭಾರಿಯಾಗಿದೆ! ಅದನ್ನು ಕಂಡು ಶಶಿಯ ಮೂರು ತುಟಿಗಳೂ ಅದುರುತ್ತಿವೆ; ಶಶಿಯ ಮೋಟು ಬಾಲ, ನೆಟ್ಟ ಕಿವಿಗಳು ಆಶ್ಚರ್ಯದಿಂದ ಅಲುಗಾಡುತ್ತಿವೆ!

ಅಲ್ಲಿ, ದೂರದಲ್ಲಿ, ಮೋಡಗಳ ನಡುವೆಯೂ ಮೊಲಗಳಿರಬಹುದು ಎಂಬುದು ಶಶಿಗೆ ಹೊಳೆದೇ ಇರಲಿಲ್ಲ! ತಾನೂ ಹಾಗೆ ಮೋಡದ ಮೊಲವಾಗಿದ್ದಿದ್ದರೆ! ಎನಿಸಿತು ಈ ಪುಟ್ಟ ಮೊಲಕ್ಕೆ. ಆಗ ಭಾಸುರಕನ ಘರ್ಜನೆ ಕೇಳಿ ಫೊಳ್ ಎಂದು ನಗಬಹುದಾಗಿತ್ತು! ಏಕೆ, ಮೇಲಿನಿಂದ ತಾನು ಗುಡುಗಿ ಸಿಂಹವನ್ನೇ ನಡುಗಿಸಬಹುದಾಗಿತ್ತು!

'ಓ! ಬರೀ ಜೊಳ್ಳು ಆಸೆಯಿಂದೇನು ಫಲ! ಕಂಡ ಕನಸೆಲ್ಲಾ ನಿಜವಾಗುತ್ತಿದ್ದರೆ ತಿರುಕ ಸಿಂಹಾಸನವೇರುತ್ತಿದ್ದ!' ಎಂದು ವಿಷಾದದಿಂದ ಶಶಿ ನೊಂದುಕೊಂಡಿತು.

CC-O. In Public Domain. Digitized by Sri Vidyabharati Book Centre, Shirgeri

CC-O. In Public Domain. Digitized by eGangotri

ನಾಲ್ಕು ಕಾಲುಗಳ ಮೇಲೂ ಕೂತು ಸುತ್ತಲೂ ಬೆಳೆದಿದ್ದ ರಸವತ್ತಾದ ಎಳೆ ಚಿಗುರು, ಹೂಗಳಿಗೆ ಶಶಿ ಬಾಯಿಹಾಕಿತು. ತನ್ನ ಮೇಲೆ ಕೆಳಗಿನ ಎರಡೆರಡು ಸಾಲು ಚೂಪು ಹಲ್ಲುಗಳಿಂದ ಕತ್ತರಿಸಿ ಮೇಯಲು ಪ್ರಾರಂಭಿಸಿತು. ಹೊಸ ಹಸಿರು ಎಷ್ಟು ಎಳಸು! ಎಷ್ಟು ರುಚಿ! ಎಲ್ಲೆಲ್ಲೂ ಎಷ್ಟು ತುಂಬಿದೆ! ತಿಂದೂ ತಿಂದೂ, ತನ್ನ ಮನೆಯವರೆಲ್ಲಾ ತಿಂದು ತೇಗಿದರೂ ಮಿಗುವಷ್ಟಿದೆ!

ಆದರೆ ಅಗಿದ ತುತ್ತು ಶಶಿಯ ಗಂಟಲಿಂದ ಕೆಳಗೇ ಇಳಿಯದು. ಅದು ತಾನು ಸಾಯುವ ದಿನ; ಅದನ್ನು ಮರೆಯುವಂತಿಲ್ಲ. ದಾರಿಯ ತುದಿಯಲ್ಲಿ ಕರುಣೆ ಇಲ್ಲದ ಸಿಂಹ ಕಾಯುತ್ತಿದೆ; ತನ್ನನ್ನೂ ತಾನು ತಿಂದಿದ್ದನ್ನೆಲ್ಲವನ್ನೂ ನುಂಗಿ ಹಾಕಿಬಿಡಲು ಕೋರೆಬಾಯಿ ತೆರೆದು ನಿಂತಿದೆ! ತನ್ನ ಜೀವನ ಯಾತ್ರೆಯ ಸುಖ, ಸಂತೋಷವನ್ನೆಲ್ಲಾ ಒಂದೇ ಏಟಿಗೆ ಭಾಸುರಕ ಇಂದು ಮುಗಿಸಿಬಿಡುವುದು! ಈ ಭಯಂಕರ ಸಾವಿನ ಚಿತ್ರ ಶಶಿಯ ಹಸಿವನ್ನೆಲ್ಲಾ ಇಂಗಿಸಿಬಿಟ್ಟಿತು! ಸಾವು ಕಾದು ನಿಂತಿರುವಾಗ ಹಸಿವೆಲ್ಲಿ ಬರಬೇಕು?! ಭಯದಿಂದ ಶಶಿಗೆ ಬಾಯೇ ಒಣಗಿಹೋಯಿತು!

ಹೆಜ್ಜೆ ಹಾಕುತ್ತಾ ಹಾಕುತ್ತಾ, 'ಈ ಹೆಜ್ಜೆ ಯಮನ ಬಾಯಿಗೆ ಇನ್ನೊಂದು ಹೆಜ್ಜೆ,' ಎಂದು ಅಂದುಕೊಳ್ಳುತ್ತಾ ಮೊಲ ಮುಂದುವರಿಯಿತು. ಮೇಲೆ ನೋಡಿದಾಗ, ಮೋಡದ ಹೊಲ ಇನ್ನೂ ದೊಡ್ಡದಾಗಿ ಬೆಳೆದಿದೆ. ಅದನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಕಂಡ ಕ್ಷಣ ಶಶಿಗೆ ಮಿಂಚಿನಂತೆ ಒಂದು ಯೋಚನೆ ಹೊಳೆಯಿತು! ಆಕಾಶದಲ್ಲಿ ಕೂತು ಬೆಳೆಯುತ್ತಿದ್ದ ತನ್ನ ದೊಡ್ಡಣ್ಣ ತನ್ನಲ್ಲಿ ಕೆಚ್ಚೆಬ್ಬಿಸುವಂತಿದೆ! ಶಶಿ ಹಾಗೇ ಯೋಚಿಸುತ್ತಾ ಅಲ್ಲೇ ನಿಂತುಬಿಟ್ಟಿತು.

'ಭಾಸುರಕನಿಗೇಕೆ ನಾನು ಬಲಿಯಾಗಬೇಕು?' ಎಂದು ಶಶಿ ತನ್ನನ್ನು ತಾನೇ ಕೇಳಿಕೊಂಡಿತು. 'ನಾನೇನೂ ಅವನಿಗೆ ಸಾಲ ಕೊಡಬೇಕಾಗಿಲ್ಲವಲ್ಲಾ! ಭೂಮಿಯ ಮೇಲೆ ಬಾಳುವುದಕ್ಕೆ ಭಾಸುರಕನಿಗೆಷ್ಟು ಹಕ್ಕೋ ನನಗೂ ಅಷ್ಟೇ ಹಕ್ಕಿದೆ!' ಎಂದು ಕೋಪದಿಂದ ಆ ಪುಟ್ಟ ಪ್ರಾಣಿ ಗೊಣಗುಟ್ಟಿತು.

ಆದರೆ ತನ್ನ ಹಕ್ಕನ್ನು ಕೇಳುವವರು ಯಾರು? ಕಟುಕ ಭಾಸುರಕ ಕೇಳುವನೇ? ಯಾರಿಗೆ ಹೇಳಿಕೊಳ್ಳುವುದು? ಬಲಿಷ್ಠರ ಸಹಾಯಕ್ಕಾದರೆ ಲೋಕವೆಲ್ಲಾ ನುಗ್ಗುವುದು; ಬಡವರ ಕೂಗು ಕಾಡಿನ ಕೂಗಷ್ಟೆ! ಕಷ್ಟದಲ್ಲಿ ಬಂಧುವೂ ಇಲ್ಲ, ಮಿತ್ರನೂ ಇಲ್ಲ, ಎಂದು ಆ ಬಡಪಾಯಿ ಚಿಂತಿಸಿತು.

ಶಶಿಗೆ ಒಂದು ಕಡೆ ದುಃಖ, ಇನ್ನೊಂದು ಕಡೆ ಕೋಪ. ತನ್ನ ಪ್ರಯತ್ನದಿಂದಲೇ ತಾನು ಪಾರಾಗಬೇಕು ಎಂದು ಶಶಿ ನಿಶ್ಚಯಿಸಿತು. ಸಿಂಹದ ಪಂಜದಿಂದ ಹೇಗಾದರೂ ತಪ್ಪಿಸಿಕೊಳ್ಳಬೇಕು—ಈಗ ಅದಕ್ಕೆ ಇದೊಂದೇ ಯೋಚನೆ. ಇದಕ್ಕಾಗಿ ಶಶಿ ತುಂಬಾ ಯೋಚಿಸತೊಡಗಿತು.

ತೆವಳುತ್ತಾ ಯೋಚಿಸುತ್ತಾ ಶಶಿಯು ಮನಸ್ಸಿನಲ್ಲಿ

Sri Vidyaniketan Public Library, Bangalore

CC-O. In Public Domain. Digitized by eGangotri

ಒಂದು ಉಪಾಯ ಮೊಳಕೆ ಎದ್ದಿತು. ಅದು ಸಾಧ್ಯವಾಗಿಯೂ ಕಂಡಿತು. ಅಲ್ಲೇ ನಿಂತು ಅದನ್ನು ಕೈಗೂಡಿಸುವುದು ಹೇಗೆಂದು ಯೋಚಿಸಿತು.

'ಭಾಸುರಕ ನನ್ನನ್ನು ಕೊಲ್ಲುವ ಮೊದಲು ನಾನೇ ಅವನನ್ನು ಕೊಂದುಹಾಕಿಬಿಟ್ಟರೆ?' ಎನ್ನಿಸಿತು ಚಿಳ್ಳೆಗೆ. ಆಗ ನಾನು, ನನ್ನವರು, ಎಲ್ಲರೂ ಹೊಟ್ಟೆಬಾಕ ರಾಕ್ಷಸನಿಂದ ಎಂದೆಂದಿಗೂ ತಪ್ಪಿಸಿಕೊಂಡು ಸುಖವಾಗಿರಬಹುದು!'

ಈ ಯೋಚನೆ ಶಶಿಗೆ ಮಿಂಚಿದ್ದೇ ತಡ, ಶಶಿಯ ಮನಸ್ಸಿನಲ್ಲಿ ಬೇಗ ಬೇಗ ಉಪಾಯ ಬೆಳೆದುಬಿಟ್ಟಿತು. ಮೋಡದ ಮೊಲದಷ್ಟು ದೊಡ್ಡದಾಯಿತು ಉಪಾಯ. ತನ್ನ ಆಸೆ ತಿರುಕನ ಕನಸಾಗಿಬಿಡಬಹುದೆಂದು ಶಶಿಗೆ ಹೊಳೆಯಲೇ ಇಲ್ಲ. ಭಯ ಒಂದೊಂದು ಸಲ ಬುದ್ಧಿಯನ್ನು ಬಹು ಚುರುಕು ಮಾಡಿಬಿಡುತ್ತದೆ.

ಶಶಿಯ ಆಸೆ ಉಬ್ಬಿದಂತೆಲ್ಲಾ ಅದರ ನಡೆ ಭಾಸುರಕನ ಗುಹೆಯ ಕಡೆಗೆ ಮೆಲ್ಲಮೆಲ್ಲಗಾಗುತ್ತಾ ಬಂತು. ಆದರೆ ಕೊಲೆಗಾರನನ್ನು ಹೇಗೆ ಕೊಲ್ಲುವುದು? ಅದು ಶಶಿಗೆ ಇನ್ನೂ ತೋಚಿರಲಿಲ್ಲ.

ಈ ಮಧ್ಯದಲ್ಲಿ ಶಶಿಗೆ ಬಾಯಾರಿಕೆಯಾಯಿತು. ಮೊದಲು ನೀರು ಕುಡಿಯೋಣ ಎಂದುಕೊಂಡು ನೀರು ಹುಡುಕಿಕೊಂಡು ಹೊರಟಿತು. ಹತ್ತಿರದಲ್ಲೇ ಬಾವಿಯೊಂದು ಕಾಣಿಸಿತು. ಆದರೆ, ಪಾಪ, ಬಾವಿಯಲ್ಲಿ ನೀರು ಆಳದಲ್ಲಿದೆ; ಶಶಿಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಎಟಕುವಂತಿಲ್ಲ. ಬಾವಿಯೆ ಅಂಚಿನಲ್ಲಿ ಶಶಿ ಮೇಲೆ ಕೂತು ಬಗ್ಗಿ ನೋಡುತ್ತಿತ್ತು. ಕೆಳಗೆ ದೂರದಲ್ಲಿ, ನೀರು-ಕನ್ನಡಿಯಲ್ಲಿ ಒಂದು ಪುಟ್ಟ ಮೊಲ ಮೇಲೆ ತನ್ನನ್ನೇ ನೋಡುತ್ತಿದೆ. ಅದರ ಮೂರು ತುಟಿಗಳೂ ಇನ್ನೇನು ಅಳುವಂತೆ ಬಿರುಗುತ್ತಿವೆ. ಆದರೆ ಶಶಿ, ಜಾಣ ಮೊಲ! ಬಾವಿಯಲ್ಲಿ ಕಾಣಿಸುತ್ತಿರುವುದು ತನ್ನ ಚಿತ್ರವೇ ಎಂದು ತಿಳಿದುಕೊಂಡಿತು.

'ಓಹೋ, ನಾನೀಗ ಅಳುವಂತಿದ್ದೇನೆ!' ಎಂದು ಯೋಚಿಸಿತು ಶಶಿ. 'ಕೂಡದು, ಈಗ ನಾನು ಎದೆಗೆಡಕೂಡದು; ಧೈರ್ಯದಿಂದಿರಬೇಕು; ಭಯಪಟ್ಟರೆ ಜೀವ ಹೋಗುವುದು!' ಎಂದುಕೊಂಡು ಮನಸ್ಸು ಗಟ್ಟಿಮಾಡಿ ಶಶಿ ತುಟಿಗಳನ್ನು ಬಿಗಿಹಿಡಿಯಿತು.

ನೀರಿನ ಗೀಳು ತಡೆಯಲಾರದೆ ಪುನಃ ಕೆಳಗೆ ನೀರಿನ ಕಡೆ ಆಸೆಯಿಂದ ಕೆಚ್ಚಿನ ಶಶಿ ಬಗ್ಗಿತು. ಆದರೇನು? ನೀರು ಸಿಗುವ ಹಾಗಿಲ್ಲ. ಬಹಳ ಕೆಳಗಿದೆ. ಅದನ್ನು ಮುಟ್ಟಲು ಹೋದರೆ ತಾನೇ ಮುಳುಗಿಹೋಗುವುದು!

ಆ ಚಿತ್ರ—ತಾನು ಮುಳುಗಿಹೋಗುವ ಚಿತ್ರ—ಮುಂದೆ ಬಂದೊಡನೆ, ಸರಿಯಾದ ಉಪಾಯವೊಂದು ಬಾವಿಯೊಳಗಿನಿಂದ ಹಾರಿಬಂದಿತು ಮೇಲೆ ಕೂತಿದ್ದ ಮೊಲಕ್ಕೆ! ಅದು ಹೇಗೆ ಬಂದಿತು ಅನ್ನುವುದು ಶಶಿಗೇ ತಿಳಿಯದು!

ಇನ್ನು ಅಲ್ಲಿ ನಿಲ್ಲಲೇ ಇಲ್ಲ ಶಶಿ. ಚಿಮ್ಮಿ ಅಮಲೇರಿದಂತೆ ಮೋಟುಬಾಲ ಕುಣಿಸುತ್ತಾ, ಓಡಿತು ಭಾಸ್ಕರಕನ ಗವಿಯ

CC-O. Sri Vidyabharathi Book Centre, Shingeri

CC-O. In Public Domain. Digitized by eGangotri

ಕಡೆಗೆ! ಸಿಂಹದೊಡನೆ ಔತಣಕ್ಕೆ ಹೋಗುತ್ತಿರುವಂತೆ ಈಗ ಶಶಿಗೆ ಸಡಗರ. ಬಾಯಾರಿಕೆ ಮರೆತೇಹೋಯಿತು. ಸಿಂಹದ ಗುಹೆಯ ಹತ್ತಿರ ಬರುವಷ್ಟರಲ್ಲಿ ಕೊಲೆಗಾರ ಭಾಸುರಕ ನನ್ನು ಕೊಲ್ಲುವ ತಂತ್ರವನ್ನು ಶಶಿ ತನ್ನ ಮನಸ್ಸಿನಲ್ಲಿ ಸಿದ್ಧ ಮಾಡಿಬಿಟ್ಟಿದೆ!

ಗವಿಯ ಬಾಗಿಲಲ್ಲಿ ರಾಜನನ್ನು ಶಶಿ ಕಾಯುವ ಆವಶ್ಯ ಕತೆಯೇ ಬರಲಿಲ್ಲ. ಹೊರಗೆ ಆಗಲೇ ಬಂದು ಈ ಕಡೆಯಿಂದ ಆ ಕಡೆ, ಆ ಕಡೆಯಿಂದ ಈ ಕಡೆ ಸಿಂಹ ಅಡ್ಡಾಡುತ್ತಿದೆ! ಕೋಪದಿಂದ ಗೆಂಡೆ ಬಾಲವನ್ನು ಸೆಣೆಸುತ್ತಾ ಗುರುಗುಟ್ಟು ತ್ತಿದೆ, ಭಾಸುರಕ! ಏಕೆ ಎಂದು ಮೊಲಕ್ಕೆ ತಿಳಿಯಲಿಲ್ಲ. ಆದರೆ ಭಾಸುರಕನ ರೋಷ ಕಂಡು ಅದರ ಎದೆ ಧಗ್ ಅಂದಿತು!

ತನ್ನ ಆಹಾರ ಬರುವ ದಾರಿಯನ್ನು ಪದೇ ಪದೇ ಸಿಟ್ಟಿ ನಿಂದ ಸಿಂಹ ನೋಡುತ್ತಿದೆ. ಹಸಿವು ತಡೆಯಲಾರದೆ ತಳಮಳಿಸುತ್ತಿದೆ. ಹಸಿವು ರಾಜರನ್ನೂ ರೇಗಿಸುತ್ತದೆ. ಮರದಡಿಯಲ್ಲಿ ನಿಂತು, ನೆಲಕ್ಕೆ ಬಾಯಿ ಚಾಚಿ ಭಾಸುರಕ ಆರ್ಭಟಿಸಿತು. ಆ ಸಿಡಿಲಿನ ಸದ್ದಿಗೆ ಕಾಡೆಲ್ಲಾ ನಡುಗಿ ಬಿಟ್ಟಿತು!

ಹತ್ತಿರ ಬಂದಿದ್ದ ಶಶಿ, ಈ ಬೊಬ್ಬೆಯಿಂದ ಮೇಲೆಗರಿ ಧಪ್ಪನೆ ಕೆಳಗೆ ಬಿದ್ದಿತು; ಭಯ ತಡೆಯಲಾಗದೆ ನಡುಗು ತ್ತಿದೆ! ಮೊಲ ಹಾರಿ ಬಿದ್ದ ಸಪ್ಪಳ ಕೇಳಿ, ಭಾಸುರಕ ಆ ಕಡೆ ತಿರುಗಿತು; ಆಗ ಶಶಿ ಕಣ್ಣಿಗೆ ಬಿತ್ತು.

Sri Vidyabharathi Book Centre, Sringeri

CC-O. In Public Domain. Digitized by eGangotri

"ಆ, ಈಗ ಬಂದೆಯೋ?!" ಎಂದು ಗುಡುಗಿತು ಸಿಂಹ. "ಏಕಿಷ್ಟು ತಡ? ನಿನ್ನೊಡನೆ ಇನ್ಯಾರೂ ಬರಲಿಲ್ಲವೋ? ನಿನ್ನೆ ಒಂದು ಚೀಟೆ ಚಿಗರೆ ನನ್ನ ಊಟಕ್ಕೆ—ಒಂದು ಬಾಯಿಗೂ ಸಾಲಲಿಲ್ಲ! ಈವತ್ತು ನೀನು, ಒಂದು ಹಲ್ಲಿಗೂ ಸಾಲದು!" ಎಂದು ಘರ್ಜಿಸಿತು ಭೂತಾಕಾರವಾಗಿ ನಿಂತಿದ್ದ ಭಾಸುರಕ.

ರಾಜನನ್ನು ಹಸಿವು ತಿಂದುಹಾಕುತ್ತಿದೆ—ಎಂದು ಶಶಿಗೆ ಸ್ಪಷ್ಟವಾಯಿತು. ರಾಜನ ಮುಂದೆ ನಿಂತಾಗ, ಗಾಬರಿಯಲ್ಲಿ, ತಾನು ಆಡಬೇಕೆಂದಿದ್ದ ನಾಟಕ, ತಾನು ಹವಣಿಸಿದ್ದ ಅಚ್ಚುಕಟ್ಟಾದ ಕತೆ—ಎಲ್ಲಾ ಮನಸ್ಸಿನಿಂದ ಅಳಿಸಿಯೇ ಹೋಯಿತು! ಗಂಟಲು ಒಣಗಿತು, ಬಾಯಿಂದ ಮಾತೇ ಹೊರಡದು! ತಬ್ಬಿಬ್ಬಾಗಿ, ತತ್ತರಿಸುತ್ತಾ, ಒಂದೊಂದು ಮಾತನ್ನೂ ಶಶಿ ತೊದಲತೊಡಗಿತು!

"ಇಲ್ಲ, ಮಹಾಸ್ವಾಮಿ! ಹೌದು, ಒಡೆಯಾ!" ಎಂದು ಒದರುತ್ತಿದೆ. ತಾನು ಆಡುತ್ತಿರುವುದು ಏನೆಂದು ತನಗೇ ಅರಿವಿಲ್ಲ!

"ಹೀಗೆಯೋ, ದರಿದ್ರರಾ, ಕೊಟ್ಟ ಮಾತು ನೀವು ನಡೆಸುವುದು?!" ಎಂದು ಭಾಸುರಕ ಬಡಬಡಿಸಿತು. "ಎಲ್ಲರನ್ನೂ ಒಟ್ಟಿಗೆ ನುಂಗಿಬಿಡುತ್ತೇನೆ, ಮೋಸಗಾರರಿರಾ!"

"ಇಲ್ಲ, ಮಹಾಸ್ವಾಮಿ! ತಪ್ಪೋದಿಲ್ಲ, ಒಡೆಯಾ! ಎಂದೆಂದಿಗೂ, ನೇವರ್‌ಆನ್, ತಪ್ಪೋದಿಲ್ಲ, ಸ್ವಾಮಿ!" ಎಂದು

Sri Vidyabharathi Book Centre, Shingeri

CC-O. In Public Domain. Digitized by eGangotri

ಗಡಗಡನೆ ನಡುಗುತ್ತಾ ಶಶಿ ಬೇಡಿಕೊಂಡಿತು.

"ಸರಿಯಾದ ಊಟ ಏಕೆ ಬರಲಿಲ್ಲ? ಮೊದಲು ಹೇಳು, ನಿನ್ನನ್ನು ನುಂಗುವುದಕ್ಕೆ ಮುಂಚೆ!" ಎಂದು ಕಾಡೆಲ್ಲಾ ಅದುರುವಂತೆ ಭಾಸುರಕ ಸಿಂಹವು ಘರ್ಜಿಸಿತು.

"ನಮ್ಮ ತಪ್ಪಲ್ಲ, ಮಹಾಸ್ವಾಮಿ; ನಿಮ್ಮ ಪಾದ!" ಎಂದು ಬಡ ಜಂತು ಶಶಿಯು ಅಂಗಲಾಚಿತು.

"ನಮ್ಮ! ಹಂ! ಯಾರು ನಿನ್ನನ್ನು ರಾಜಪದವಿಗೆ ಏರಿಸಿದವರು? 'ನಮ್ಮ! ನಾವು!' ಕೀಟ! ಎಷ್ಟು ಗರ್ವ ನಿನಗೆ!" ಎಂದು ಹೀಯಾಳಿಸಿತು ಭಾಸುರಕ.

"ಅಂದರೆ....ನಾವು....ಐವರು. ನಮ್ಮ ಸಂಸಾರವೆಲ್ಲಾ ಕೂಡಿ, ಒಡೆಯ! ನಾವೆಲ್ಲರೂ ಊಟಕ್ಕೆ ಸಿದ್ಧರಾಗಿ ಹೊರಟಾಗ...."

"ಯಾರ ಊಟಕ್ಕೆ? ನಿಮ್ಮದೋ, ನನ್ನದೋ?" ಎಂದು ಗದರಿಸಿತು ಸಿಂಹರಾಜ.

"ತಮ್ಮದು, ಮಹಾಸ್ವಾಮಿ; ತಮ್ಮದು!"

"ಮತ್ತೆಲ್ಲಿ? ನಿನ್ನ ದೊಡ್ಡ ಸಂಸಾರ—ಊಟಕ್ಕೆ ಸಿದ್ಧವಾಗಿ ಹೊರಟವರೆಲ್ಲಾ ಎಲ್ಲಿ?" ಎಂದು ಎಲ್ಲಾ ಕಡೆಯೂ ಹಸಿದ ಭಾಸುರಕ ಹುಡುಕಿ ನೋಡುತ್ತಿದೆ.

"ಅದನ್ನೇ ಅರಿಕೆ ಮಾಡುತ್ತಿದ್ದೆ, ಮಹಾಸ್ವಾಮಿ," ಎಂದು ಒಂದು ಸುಳ್ಳಿನ ಜೊತೆಗೆ ಇನ್ನೊಂದನ್ನು ಪೋಣಿಸಿತು ಮೊಲ.

Sri Vidyabharathi Book Centre, Sringeri

CC-O. In Public Domain. Digitized by eGangotri

"ನಿನ್ನನ್ನು ತಿಂದು ಆಮೇಲೆ ಕೇಳುತ್ತೇನೆ, ಬಾ!" ಎಂದು ಘರ್ಜಿಸಿತು ಸಿಂಹ. ಹಸಿವಿನಿಂದ ಕಂಗೆಟ್ಟಿದ್ದ ಭಾಸುರಕ ಯೋಚಿಸದೆಯೇ ಬಡಬಡಿಸುತ್ತಿದೆ. ಚೂಪಾದ ಐದು ಕೊಂಕು ಉಗುರುಗಳನ್ನು ತೆರೆದು ಆ ಪುಟ್ಟ ಮೊಲದ ಮೇಲೆ ತನ್ನ ಮೊರದಷ್ಟು ದೊಡ್ಡ ಪಂಜವನ್ನು ಅಪ್ಪಳಿಸಿಯೇ ಬಿಟ್ಟಿತು!

ಆ ಹೊಡೆತ ಶಶಿಯನ್ನು ಮುಗಿಸಿಬಿಡುತ್ತಿತ್ತು; ಮಾಂಸದ ಮುದ್ದೆಯಾಗಿ ಅದು ಭಾಸುರಕನ ಬಾಯಿಗೆ ಒಂದೇ ತುತ್ತಾಗಿ ಬಿಡುತ್ತಿತ್ತು! ಆದರೆ ಮೊಲ ಸಿಂಹಕ್ಕಿಂತ ಚುರುಕು.

"ಇಲ್ಲ, ಮಹಾಸ್ವಾಮಿ!" ಎಂದು ಚೀರುತ್ತಾ ಹಾರಿ, ದೂರ ನೆಗೆದು ಪಂಜದಿಂದ ತಪ್ಪಿಸಿಕೊಂಡಿತು. "ನಾನು ತಮ್ಮೊಳ್ಳಕ್ಕೆ ಹೋದಮೇಲೆ ನನ್ನ ಮಾತು ಕೇಳೋದಿಲ್ಲ ನಿಮಗೆ!" ಎಂದು ನಡುಗುತ್ತಾ ಅಲ್ಲಿಂದಲೇ ಕಿರಿಚಿತು ಶಶಿ. ಭಾಸುರಕ ಬಜ್ಜಿ ಮಾಡಿ ತನ್ನನ್ನು ನುಂಗಿದ ಮೇಲೆ ತನಗೆ ಮಾತೆಲ್ಲಿ ಬಂತು ಎಂಬುದನ್ನು ಆ ಭಯದಲ್ಲಿ ಮರೆತೇಬಿಟ್ಟಿತು ಶಶಿ. ಆದರೇನು? ಬರುವ ಸಾವನ್ನು ದೂರಮಾಡುವುದು ಮುಖ್ಯ.

"ಹೇಳು, ಬೇಗ ಮುಗಿಸು!" ಎಂದು ಗದರಿಸಿತು ಸಿಂಹ. ಮುಂದೆ ನಿಂತಿರುವ ಊಟ ಭಾಸುರಕನ ಬಾಯಿಂದ ಜೊಲ್ಲು ಸುರಿಸುತ್ತಿದೆ. "ಹೇಳ್ತೀನಿ, ಹೇಳ್ತೀನಿ, ಒಡೆಯ!" ಎಂದು ಒಣಗಿದ ಗಂಟಲಿನಿಂದ ಶಶಿ ಉಸಿರಿತು. "ನಾ ಹೇಳಿದ

Siddhanta eGangotri Book Centre, Sirsi-Sagar

CC-O. In Public Domain. Digitized by eGangotri

ಹಾಗೆ....ಆಗಲೇ ಹೇಳಿದೆನಲ್ಲಾ ....” ಎಂದು ತೊದಲುತ್ತಾ ಸುಳ್ಳುಗಳನ್ನು ಜೋಡಿಸಹತ್ತಿತು ದಿಗಿಲಿನಿಂದ ಬೆವರುತ್ತಿದ್ದ ಮೊಲ.

ಸಣ್ಣ ಪುಟ್ಟ ಭಯಗಳಿಗೇ ನಾಲಗೆಯಿಂದ ಸುಳ್ಳು ನೆಗೆದು ಬರುವುದು ; ಯಮನೇ ಎದುರು ನಿಂತಿರುವಾಗ ಕೇಳಬೇಕೇ? ಶಶಿಯ ಬಾಯಿಂದ ಸಟೆ ತೊಟ್ಟಿಕ್ಕುತ್ತಾ ಹೊರಟು, ಝರಿಯಾಗಿ, ತೊರೆಯಾಗಿ, ನದಿಯಾಗಿ, ಪ್ರವಾಹವಾಗಿ ಕೋರೆದಾಡೆಯ ಸಿಂಹವನ್ನೇ ಕೊಚ್ಚಿಕೊಂಡು ಹೋಗುವಂತೆ ನುಗ್ಗಿತು.

“ನಾವು ಪುಟ್ಟ ಪ್ರಾಣಿಗಳಾದುದರಿಂದಲೇ ಅಷ್ಟು ಮಂದಿಯನ್ನೂ ರಾಜರ ಊಟಕ್ಕೆ ಕಳುಹಿಸಿದರು, ಸ್ವಾಮೀ.”

“ಎಲ್ಲಿ ಅವೆಲ್ಲಾ?” ಎಂದು ಬಾಯಲ್ಲಿ ನೀರು ಸುರಿಸುತ್ತಾ ಕೇಳಿತು ಭಾಸುರಕ. ನಾಲಗೆಯಿಂದ ತುಟಿಗಳನ್ನು ಸವರಿಕೊಳ್ಳುತ್ತಿದೆ.

“ಓ ಮಹಾಸ್ವಾಮಿ, ದೊಡ್ಡ ಸಿಂಹ ಒಂದು ಅವನ್ನೆಲ್ಲಾ ಹಿಡಿದು ಸೆರೆ ಹಾಕಿಬಿಟ್ಟಿದೆ!” ಎಂದು ಸಟೆಯ ಸರಣಿ ಕಟ್ಟಿತು ಶಶಿ. “ದಾರಿಯಲ್ಲಿ ನಾವೆಲ್ಲಾ ಓಡಿ ಓಡಿ ಬರುತ್ತಿರುವಾಗ ನಮ್ಮನ್ನೆಲ್ಲಾ ಅಡ್ಡಹಾಕಿಬಿಟ್ಟಿತು! ಇನ್ನೇನು ಅಲ್ಲೇ ತಿಂದೇ ಹಾಕಿಬಿಡುತ್ತಿತ್ತು!”

“ಆಂ?! ಹಾಗೇ?!” ಎಂದು ಆಶ್ಚರ್ಯದಿಂದ ಕೇಳಿತು ಸಿಂಹ.

Sri Vidyabharathi Book Centre, Sringeri

CC-O. In Public Domain. Digitized by eGangotri

"ಹೌದು, ಮಹಾಸ್ವಾಮಿ. ಆದರೆ ನಾನು ಹೇಳಿದೆ, 'ನಮ್ಮ ಚಕ್ರವರ್ತಿ ಭಾಸುರಕರು ಮಹಾ ಶಕ್ತಿವಂತರು. ಇಂಥಾ ಅಪಮಾನವನ್ನು ಅವರು ಸಹಿಸುವುದಿಲ್ಲ!' ಎಂದೆ ಒಡೆಯಾ."

"ಎಂದಿಗೂ ಇಲ್ಲ!" ಎಂದು ಘರ್ಜಿಸಿತು. ಸಿಂಹರಾಜನ ಮುಖದ ಸುತ್ತಲೂ ತುಂಬಿದ್ದ ಕೂದಲು ಕೋಪದಿಂದ ಮುಳ್ಳುಗಳಂತೆ ಮೇಲೆದ್ದು ನಿಂತುವು!

"ಆದರೆ ಆ ಧಾಂಡಿಗ ನಿಮ್ಮನ್ನು ಲಕ್ಷಿಸಲೇ ಇಲ್ಲ, ಒಡೆಯ."

"ಲಕ್ಷಿಸಲಿಲ್ಲವೇ?!"

"ಇಲ್ಲ, ಮಹಾಸ್ವಾಮಿ! 'ಯಾರವನು ಭಾಸುರಕ? ನಿನ್ನ ರಾಜ?' ಎಂದು ಕೀಳಾಗಿ ಕೇಳಿದ. 'ಅವನ ಹೆಸರೇ ಕೇಳಿಲ್ಲ. ನಾನು ಈ ಕಾಡಿಗೆ ಒಡೆಯ. ಯಾವುದೋ ಕಳ್ಳ, ಹೇಡಿ, ಬೆಕ್ಕಿನಂತೆ ನನ್ನ ರಾಜ್ಯಕ್ಕೆ ನುಸಿದು ಬಂದಿರಬೇಕು. ರಾಜನಂತೆ! ರಾಜ! ಎಂದೂ ಅವನು ಬೇಟೆಯಾಡುವುದನ್ನು ಯಾರೂ ಎಲ್ಲೂ ಕಂಡಿಲ್ಲ. ತನ್ನ ಆಹಾರವನ್ನು ಕದ್ದೋ, ತಿರುಪೆ ಬೇಡಿಯೋ ನೀಚ ನರಿಯಂತೆ ನನ್ನ ರಾಜ್ಯದಲ್ಲಿ ಜೀವಿಸುತ್ತಿರಬೇಕು ಅವನು!' ಎಂದು ಹೀನಾಯವಾಗಿ ಬೈದ, ನನ್ನೊಡೆಯ!"

"ಹಾಗೆಂದನೇ?! ನನ್ನ, ಈ ಭಾಸುರಕನನ್ನು!" ಎಂದು ಸಿಂಹರಾಜ ಘರ್ಜಿಸಿತು. ಕೋಪಾವೇಶವನ್ನು ಮಾಡುತ್ತಿದ್ದ

Sri Vijaya Vijaya Book Centre, Sirsi

 CC-O. In Public Domain. Digitized by eGangotri

ಸಿಂಹಕ್ಕೆ ಶಶಿ ಗುರಿ ಇಟ್ಟು ಹೊಡೆದ ಬೈಗುಳದ ಬಾಣ ಆಳವಾಗಿ ನೆಟ್ಟಿತು.

"ಅಷ್ಟೇ ಅಲ್ಲ!" ಎಂದು ತನ್ನ ಕಟ್ಟುಕತೆ ಹೆಣೆಯುತ್ತಾ ಭಾಸುರಕನನ್ನು ಶಶಿ ಇನ್ನಷ್ಟು ರೇಗಿಸಿತು. "'ಈ ವನ ರಾಜ್ಯಕ್ಕೆ ಒಬ್ಬನೇ ರಾಜ; ಇಬ್ಬರಿರಲಾರರು. ಆ ರಾಜ ನಾನು,' ಎಂದಿತು, ಮಹಾಪ್ರಭು."

"'ಭಾಸುರಕನೇ ನಮ್ಮ ರಾಜ,' ಎಂದೆ ನಾನು."

"ಸರಿಯೆ," ಎಂದು ಗರ್ವದಿಂದ ಭಾಸುರಕ ತಲೆಯೆತ್ತಿ ನಿಂತಿತು.

"ಆದರೆ, ಆ ರಾಕ್ಷಸ ಸಿಂಹ, 'ರಾಜ್ಯ ಅಂದರೆ ಕಾಡಿನಲ್ಲಿ ಎಲ್ಲೋ ಬಿದ್ದಿರುವ ಕೊಳಕು ಮೂಳೆಯಲ್ಲ. ರಾಜ್ಯ ಬೇಕಿದ್ದರೆ ಬಂದು ನನ್ನೊಡನೆ ಯುದ್ಧ ಮಾಡಲಿ! ಹೋಗು, ನನ್ನ ಸವಾಲು ಹಾಕು ನಿನ್ನ ರಾಜನಿಗೆ!' ಎಂದು ನನ್ನನ್ನು ಒದ್ದು ಕಳುಹಿಸಿದ್ದಾನೆ ತಮ್ಮಲ್ಲಿಗೆ, ಮಹಾಸ್ವಾಮಿ!" ಎಂದು ತನ್ನ ಶತ್ರುವಿನ ಕಿಚ್ಚೇರಿಸಿತು ಪುಟ್ಟ ಮೊಲ.

"ನನ್ನ ಪ್ರಜೆಯನ್ನು ಒದ್ದನೇ?! ಎಷ್ಟು ಅವನ ಕೆಚ್ಚು! ನನಗೇ ಅದು ಅಪಮಾನ!"

"ಆ ರಾಕ್ಷಸ ಕೇಸರ ನಮ್ಮನ್ನು ತಡೆಯದಿದ್ದರೆ, ಎಷ್ಟೋ ಮುಂಚೆ ತಮ್ಮ ಪಾದ ಸೇರುತ್ತಿದ್ದೆವು, ನನ್ನೊಡೆಯ," ಎಂದು, ಸಿಂಹದ ಕೋಪದ ಬೆಂಕಿಗೆ ಇನ್ನಷ್ಟು ಕಟ್ಟಿಗೆಯನ್ನು ಶಶಿ ತುರುಕಿತು.

CC-O. In Public Domain. Digitized by eGangotri

"ಹಾಗೋ?!" ಎಂದು ಭಾಸುರಕ ತಡೆಯಲಾರದ ರೋಷದಿಂದ ಕುದಿಯುತ್ತಾ ಆರ್ಭಟಿಸಿತು. "ನಡೆ, ಅವನೆಡೆಗೆ ನನ್ನನ್ನು ಕರೆದುಕೊಂಡು ಹೋಗು! ಎಲ್ಲಿರುವನು ಆ ನೀಚ?! ಯಾರು ರಾಜ, ಯಾರು ಕಳ್ಳ, ತೋರಿಸುತ್ತೇನೆ!"

"ಅಪ್ಪಣೆ, ಮಹಾಸ್ವಾಮಿ," ಎಂದು, ಒಳಗೇ ಹಿಗ್ಗುತ್ತಾ, ತಾನು ನೋಡಿದ್ದ ಬಾವಿಯ ಕಡೆ ಶಶಿ ಮುಂದೆ ಓಡಿತು. ತನಗೆ ಒಳ್ಳೆಯ ಉಪಾಯ ಎತ್ತಿ ತೋರಿಸಿದ ಆಳದ ಬಾವಿಯೇ ಅದು.

ಭಾಸುರಕ ಕೋಪದಿಂದ ಕುದಿಯುತ್ತಾ ದಾಪುಗಾಲು ಹಾಕಿಕೊಂಡು, ಗೆಂಡೆ ಬಾಲವನ್ನು ಸೆಣೆಯುತ್ತಾ, ಶಶಿಯ ಹಿಂದೆ ಓಡಿತು. ಬಾವಿಯನ್ನು ಸಮೀಪಿಸಿದಾಗ, ದೂರದಲ್ಲೇ ನಿಂತಿತು ಶಶಿ.

"ಅಗೋ, ಅಲ್ಲಿ, ಮಹಾಸ್ವಾಮಿ, ಆ ರಾಕ್ಷಸ ಸಿಂಹದ ಗುಹೆ, ಅಲ್ಲಿದೆ!" ಎಂದು ಭಯದಿಂದ ನಡುಗುತ್ತಿರುವಂತೆ ನಟಿಸುತ್ತಾ ಉಸಿರಿತು ಶಶಿ. "ಅದು ಪಾತಾಳದಲ್ಲಿ ಮನೆ ಮಾಡಿಕೊಂಡಿದೆ, ಪ್ರಭು. ಆದರೆ ಹತ್ತಿರ ಹೋಗಲು ನನಗೆ ಭಯ!" ಎಂದು ಹಿಂದಕ್ಕೆ ಒಂದು ಹೆಜ್ಜೆ ಇಟ್ಟಿತು.

"ನನಗೆ ಭಯವಿಲ್ಲ!" ಎಂದು ಘರ್ಜಿಸಿತು ಭಾಸುರಕ. ಏಕೆಂದರೆ, ಸಿಂಹಜಾತಿಗೆ ಭಯವೇ ತಿಳಿಯದು.

ಹಾರಿ, ಬಾವಿಯ ಅಂಚಿನಲ್ಲಿ ಕೂತು ಬಗ್ಗಿ ನೋಡಿತು ಭಾಸುರಕ. ಒಳಗೆ ಕಗ್ಗತ್ತಲೆ; ಆಳವಾಗಿದೆ ಗುಹೆ. ತುಂಬಾ

Sri Vidyabharathi Book Centre, Sringeri

 CC-O. In Public Domain. Digitized by eGangotri

ಕೆಳಗೆ, ಅಡಿಯಲ್ಲಿ ಭಯಂಕರವಾದ ಸಿಂಹದ ತಲೆಯೊಂದು ಎದ್ದು ಕಾಣುತ್ತಿದೆ. ಅದರ ಗಡ್ಡ, ಕತ್ತಿನ ಸುತ್ತ ಕೂದಲು ಕೆದರಿದೆ. ಕಣ್ಣುಗಳು ಕೆಂಡದಂತೆ ಕೆಂಪಗೆ ಕಾಯುತ್ತಿವೆ. ಉದ್ದವಾದ ಮೀಸೆಯ ಕೂದಲುಗಳು ಅದುರುತ್ತಿವೆ. ಆ ಭಾರಿ ಸಿಂಹ ದುರುದುರನೆ ರೋಷದಿಂದ ಭಾಸುರಕನನ್ನು ಎವೆಯಿಕ್ಕದೆ ಎದುರಿಸುತ್ತಿದೆ.

ಶತ್ರುವನ್ನು ಕಂಡು ಭಾಸುರಕನ ರೋಷ ಇನ್ನಷ್ಟು ಉರಿಯಹತ್ತಿತು. ತನ್ನ ತಲೆಯನ್ನೂ ಕೇಸರವನ್ನೂ ರೊಚ್ಚಿನಿಂದ ಕೊಡವಿತು ಭಾಸುರಕ. ಆಳದ ಗುಹೆಯಲ್ಲಿನ ಸಿಂಹ, ಅದೇ ರೀತಿ, ಆಗಲೇ ತಾನೂ ರೋಷದಿಂದ ಒದರಿತು. ಶತ್ರು ತನ್ನನ್ನು ಅಣಕಿಸುವುದನ್ನು ನೋಡಿ ಭಾಸುರಕ ಕಿಡಿಕಿಡಿಯಾಯಿತು.

"ಬಾ, ಯುದ್ಧ ಮಾಡು, ಹೇಡಿ!" ಎಂದು ಸಿಡಿಯಿತು ಮೇಲಿಂದ ಭಾಸುರಕ.

ಅದರ ಜೊತೆಯಲ್ಲೇ, ಅದರಂತೆಯೇ, ಕೆಳಗಿನಿಂದ ನೀರು-ಕನ್ನಡಿಯ ಸಿಂಹ, ಅದಕ್ಕೆ ಎರಡರಷ್ಟು ಗಟ್ಟಿಯಾಗಿ ಘರ್ಜಿಸಿಬಿಟ್ಟಿತು: "ಬಾ, ಯುದ್ಧ ಮಾಡು, ಹೇಡಿ!"

"ಓ, ನಿನಗೆ ನಾನು ಅಂಜುವೆನೇ?!" ಎಂದು ಪುನಃ ಸವಾಲು ಹಾಕಿ ಭಾಸುರಕ ಯುದ್ಧಕ್ಕೆ ಧುಮುಕಿಯೇ ಬಿಟ್ಟಿತು!

ಹಾಗೆಯೇ, ಚಾಚೂ ತಪ್ಪದೆ, ಸವಾಲನ್ನು ಇನ್ನೂ

CC-O. In Public Domain. Digitized by eGangotri

ಗಡುಸಾಗಿ ಹಿಂದಕ್ಕೆಸೆಯುತ್ತಾ ನೀರು-ಕನ್ನಡಿಯ ಸಿಂಹ ಮೇಲಕ್ಕೆ, ಭಾಸುರಕನ ಕಡೆ ಹಾರಿತು. ಎರಡು ಸಿಂಹಗಳೂ ಬಾವಿಯಲ್ಲಿ ನೀರು ಮುಟ್ಟಿದ ಕ್ಷಣ, ಮೂತಿಗೆ ಮೂತಿ, ಪಂಜಕ್ಕೆ ಪಂಜ ಢಿಕ್ಕಿ ಹೊಡೆದುವು! ಭಾಸುರಕ ನೀರೊಳಗೆ ಮುಳುಗಿಯೇಹೋಯಿತು!

ಆ ಸಮಯಕ್ಕೆ ಸರಿಯಾಗಿ ಹಾರಿಬಂದು ಬಾವಿಯಂಚಿನಲ್ಲಿ ಬಗ್ಗಿ ನೋಡುತ್ತಾ ಇದ್ದ ಶಶಿಯ ಮುಖಕ್ಕೆ ಚಕ್ಕನೆ ನೀರು ಎರಚಿತು. ಕಟುಕ ರಾಜ ನೀರಲ್ಲಿ ಮುಳುಗಿ ಸಾಯುವುದನ್ನು ಶಶಿ ಖುಶಿಯಿಂದ ನೋಡತೊಡಗಿತು.

ಬಾವಿಯಡಿಯಿಂದ ಗುಳುಗುಳು ಶಬ್ದ, ನೀರಿನಿಂದ ಘರ್ಜನೆ, ಸಿಂಹದ ಒದ್ದಾಟ, ಎಲ್ಲಾ ಮೇಲೆ ಬರುತ್ತಿವೆ. ಸ್ವಲ್ಪ ಹೊತ್ತಾದ ನಂತರ, ನಿಶ್ಶಬ್ದ ; ಶಾಂತಿ.

ಇನ್ನು ಕೇಡಿಗ ಭಾಸುರಕನ ಹಾವಳಿ ಕೊನೆಗಂಡಿತು ಎಂದು ಶಶಿಗೆ ನಿರ್ಧರವಾಯಿತು. ಆಗಲೇ ಹಾರಿ, ನೆಗೆದು, ಕುಪ್ಪಳಿಸುತ್ತಾ ಓಡಿತು ಆ ದಿಟ್ಟ ಮೊಲ. ಅಂದಿನಿಂದ "ದುಷ್ಟರಿಗೆ ಕಡೆಗೆ ಅನಿಷ್ಟವೇ ಗತಿ," ಎಂಬ ಶುಭ ಸಮಾಚಾರವನ್ನು ಕಾಡಿನ ಮಿತ್ರರಿಗೆಲ್ಲಾ ಹರಡುತ್ತಿದೆ ನಮ್ಮ ಶಶಿ.

CC-O. In Public Domain. Digitized by eGangotri

ಇಂದುಮುಂದಿನ ಕಾಲಗಳು ದಿನೇದಿನೇ ಹೆಚ್ಚುಹೆಚ್ಚಾಗಿ ವಿಜ್ಞಾನಯುಗವಾಗುತ್ತಾ ಬರುತ್ತಿವೆ. ನನ್ನಪ್ರಾಣಗಳು ತುಂಬಿ, ಮನೋಹರವಾಗಿ ಮಾನವಜೀವನವನ್ನು ಅನುಕರಿಸಿ ನಾಟಕವಾಡಿ ತೋರಿಸುವ ವಿಷ್ಣುಶರ್ಮನ ಕಥಾಸರಣಿಯಲ್ಲಿ ಪ್ರಾಣಿಸಂಬಂಧ ವಿಜ್ಞಾನವಿಚಾರಗಳನ್ನು ಮಕ್ಕಳಿಗೆ (ಏಕೆ, ವಯಸ್ಕರಿಗೂ) ಸ್ವಾರಸ್ಯವಾಗಿ ತಿಳಿಸಿ, ಪ್ರಾಣಿಶಾಸ್ತ್ರದಲ್ಲೇ ಕುತೂಹಲವನ್ನು ಕೆರಳಿಸುವ ಅವಕಾಶಗಳು ಎಷ್ಟಿವೆ!

ಇದನ್ನು ಕಂಡು ಮೊಟ್ಟಮೊದಲು ಇಂಗ್ಲಿಷಿನಲ್ಲಿ ಈ ಹೊಸ ಕಾರ್ಯವನ್ನು ಕೈಕೊಂಡೆ. ಕೆಲವು 'ಹೊಸ ರೂಪ'ದ ಕಥೆಗಳು *Bhavan's Journal*ನಲ್ಲಿ ಬಿಡಿಬಿಡಿಯಾಗಿಯೂ, ನಂತರ Macmillans (India)ರವರಿಂದ ಒಂದು ಗುಚ್ಛವಾಗಿಯೂ ಪ್ರಕಟವಾದುವು. ಈ ಕಥೆಗಳಲ್ಲಿ ಸಮಯಾನುಸಾರ ಜಂತುಗಳ ದೇಹರಚನೆ, ಒಳಾಂಗಗಳ ಕ್ರಿಯಾರೀತಿ, ಆಯಾ ಪ್ರಾಣಿಗಳ ಸ್ವಭಾವ, ಪರಸ್ಪರ ವೃತ್ತಾಸ, ವೈಶಿಷ್ಟ್ಯಗಳನ್ನು ಮಕ್ಕಳಿಗೆ ಆಕರ್ಷಣೀಯವಾಗಿ ಚಿತ್ರಿಸಲು ಯತ್ನಿಸಿದ್ದೇನೆ.

ನಾಟಕೀಯವಾಗಿರುವ ಕೆಲವು 'ಹಿತೋಪದೇಶ'ದ ಕಥೆಗಳನ್ನು ಮಕ್ಕಳ ರಂಗಕ್ಕೆ ಅಳವಡಿಸಿದ್ದೇನೆ. ಈಗ ಕೆಲವು ಕಥೆಗಳನ್ನೂ ಒಂದು ಮಕ್ಕಳ ನಾಟಕವನ್ನೂ 'ಹೊಸ ರೂಪದ ಹಿತೋಪದೇಶ' ಎಂಬ ಸೂಲೆಯಲ್ಲಿ ಗೀತಾ ಬುಕ್ ಹೌಸ್ ಪ್ರಕಾಶಕರು ಕನ್ನಡದಲ್ಲಿ ಪ್ರಕಟಿಸುತ್ತಿದ್ದಾರೆ. ವಿಜ್ಞಾನದ ಚಿಮಿಕಿ ಅಂಗಿ ತೊಟ್ಟಿರುವ ಈ ಸರಣಿ ಮೂಲ ಇಂಗ್ಲಿಷ್ ಸರಣಿಯಂತೆ ಜನಪ್ರಿಯವಾದರೆ, ಈ ಕಾರ್ಯದಲ್ಲಿ ಭಾಗವಹಿಸಿರುವ ನನುಗೆಲ್ಲಾ ಸಂತೋಷ, ತೃಪ್ತಿ.

ಕೆ. ಎಸ್. ರಂಗಪ್ಪ

ಮೈಸೂರು
ಫೆಬ್ರುವರಿ 29, 1984

Sri Vidyabharathi Book Centre, Sringeri

CC-O. In Public Domain. Digitized by eGangotri

'ನೀತಿಕಥಾಭಂಡಾರ' (ಸಚಿತ್ರ)—ಎ. ಎನ್. ಭಟ್

(1) ಹೊಲದಲ್ಲಿ ಬಿತ್ತಿದ ಹಣ ಮತ್ತು ಇತರ ಕಥೆಗಳು . 3 00
(2) ಪಾರಿವಾಳದ ಪಂಚಶೀಲ ಮತ್ತು ಇತರ ಕಥೆಗಳು . 3 00
(3) ಬಲವೋ, ಬುದ್ಧಿಯೋ? ಮತ್ತು ಇತರ ಕಥೆಗಳು . 3 00
(4) ಕೋಳಿ-ನಾಯಿ ಜಗಳ ಮತ್ತು ಇತರ ಕಥೆಗಳು . 3 00
(5) ಹದ್ದು-ಕರಡಿಯ ನ್ಯಾಯಸಂಧಾನ ಮತ್ತು ಇತರ ಕಥೆಗಳು 3 00

ಹೊಸ ರೂಪದ 'ಹಿತೋಪದೇಶ'—ಕೆ. ಎಸ್. ರಂಗಪ್ಪ

(1) ಕಥೆಗಳ ಕಥೆ ಮತ್ತು ಕುಚೇಷ್ಟೆಯ ಕೋತಿ . . 3 00
(2) ಶಕ್ಕುನಿಗೆ ಪೂಜೆ 3 00
(3) ದಿಟ್ಟ ಪೊಲ 3 00
(4) ಕೊಲೆಗಾರನ ಕೊಲೆ (ಮಕ್ಕಳ ನಾಟಕ) . . . 3 00

ಪುಟ್ಟಣ್ಣ ಹೇಳಿದ ಕಥೆಗಳು—'ನೀತಿಚಿಂತಾಮಣಿ' ಖ್ಯಾತಿಯ ಎಂ. ಎಸ್. ಪುಟ್ಟಣ್ಣ (ಸಚಿತ್ರ)

(1) ಹಕ್ಕಿಯ ಬುದ್ಧಿ ಮತ್ತು ಇತರ ಐದು ಕಥೆಗಳು . 2 00
(2) ಹಸು ಮತ್ತು ಹೆಗ್ಗಣ ಮತ್ತು ಇತರ ಏಳು ಕಥೆಗಳು 2 00
(3) ನ್ಯಾಯಾಧಿಪತಿಯ ಯುಕ್ತಿ ಮತ್ತು ಇತರ ಏಳು ಕಥೆಗಳು 2 00

ಬ್ರಹ್ಮಾಂಡ ನೋಡು, ವಿಜ್ಞಾನ ಕಲಿ (ಸಚಿತ್ರ)
—ಸಿ. ಕೆ. ವೆಂಕಟನರಸಿಂಹಯ್ಯ (ಭಾರತ ಸರ್ಕಾರದಿಂದ ಬಹುಮಾನಿತ ಕೃತಿ) 6 00

ನಿರ್ಮಲ ಭಾರತೀ ಅಥವಾ ಮಕ್ಕಳ ಮಹಾಭಾರತ (ಸಚಿತ್ರ)
—ಎ. ಆರ್. ಕೃಷ್ಣಶಾಸ್ತ್ರೀ 5 00

ಗೀತಾ ಬುಕ್ ಹೌಸ್ : ಪ್ರಕಾಶಕರು : ಮೈಸೂರು
Sri Vidyabharathi Book Centre, Sringeri

ರೂ. 3